
ಬೆಲೆ ರೂ.2.50
D.O.P - 15th of every month at Udupi Sorting Office




# ಶ್ರೀ ಶಾರದಾ

ಮಾಸಪತ್ರಿಕೆ – 15 ಮೇ 2018

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-18 ಸಂಚಿಕೆ-5 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಉಡುಪಿ ಇದರ ನಿಯಮಾವಳಿಗಳ ಪರಿಷ್ಕರಣೆ ಸಂಪೂರ್ಣ



52 ವರ್ಷಗಳ ಹಿಂದೆ ರೂಪಿಸಲಾಗಿದ್ದ ನಮ್ಮ ಸಂಘದ ನಿಯಮಾವಳಿಗಳು ಹಲವಾರು ಬಾರಿ ತಿದ್ದುಪಡಿ ಹೊಂದಿತ್ತು. ಇನ್ನು ಕೆಲವು ನಿಯಮಗಳು ಈ ಸಂದರ್ಭಕ್ಕೆ ಸೂಕ್ತವೆನಿಸದೆ ಬದಲಾವಣೆಯನ್ನು ನಿರೀಕ್ಷಿಸುತ್ತಿದ್ದವು. ಹಾಗೆಯೇ ಕಾರ್ಯಕರ್ತರ ಉತ್ಸಾಹ, ಸಾಮರ್ಥ್ಯ ಹಾಗು ಅಭಿರುಚಿಗೆ ತಕ್ಕಂತೆ ಸಂಘದ ಕಾರ್ಯವ್ಯಾಪ್ತಿಗೆ ಹೊಸ ಉದ್ದೇಶಗಳನ್ನು ಸೇರ್ಪಡೆಗೊಳಿಸುವ ಅಗತ್ಯವೂ ಇತ್ತು. ಸಂಘವು ರಚನೆಯಾದಾಗ ಹಿರಿಯರಿಗಿದ್ದ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ನಿಯಮಗಳನ್ನು ಅಮೂಲಾಗ್ರವಾಗಿ ಸಂಪಾದಿಸಿ ಅದನ್ನು ಪುಸ್ತಕರೂಪದಲ್ಲಿ ದಾಖಲಿಸುವ ಕೆಲಸಕ್ಕೆ ಪ್ರಸಕ್ತ ಆಡಳಿತ ಮಂಡಳಿಯು ಕೈಹಾಕಿತ್ತು. ಅಂತೆಯೇ ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರ ರಾಯರ ನೇತೃತ್ವದಲ್ಲಿ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು ಮತ್ತು ಶ್ರೀ ಸಿ.ಎಸ್.ರಾವ್ , ಕರಂಬಳ್ಳಿ ವೆಂಕಟರಾವ್, ಶ್ರೀ ನಿರಂಜನ ರಾವ್ ಮತ್ತು ಶ್ರೀ ಜಯರಾಮ ರಾವ್, ಇವರನ್ನೊಳಗೊಂಡ ನಿಯಮಾವಳಿಗಳ ಪರಿಷ್ಕರಣಾ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ಸಂಘದ ಸದಸ್ಯರ ಸಲಹೆಗಳನ್ನು ಪಡೆದುಕೊಂಡು, ನಮ್ಮ ಸಂಘದ ಮೂಲ ನಿಯಮಾವಳಿಗಳು ಹಾಗೂ ಇತರ ಸಂಘ ಸಂಸ್ಥೆಗಳ ನಿಯಮಾವಳಿಗಳನ್ನು ಅಧ್ಯಯನ ಮಾಡಿ, ಲೆಕ್ಕ ಪರಿಶೋಧಕರಾದ ಶ್ರೀ ಗಣೇಶ್ ಹೆಬ್ಬಾರ್‌ರ ಸಲಹೆಗಳನ್ನು ಪಡೆದು ಪರಿಷ್ಕೃತ ನಿಯಮಾವಳಿಗಳನ್ನು ಚರ್ಚಿಸಿ, ಕರಡು ಪ್ರತಿಯನ್ನು ಸಿದ್ಧಗೊಳಿಸಿ ತಾ.18.03.2018ರಂದು ನಡೆದ ವಿಶೇಷ ಮಹಾಸಭೆಯಲ್ಲಿ ಮಂಡಿಸಿದರು.

ಸಂಜೆ ನಾಲ್ಕುಗಂಟೆಗೆ ಶ್ರೀಮತಿ ಜಯಲಕ್ಷ್ಮೀ ಮುರಳೀಧರ್‌ರರವರ ಪ್ರಾರ್ಥನೆಯೊಂದಿಗೆ ಸಭೆಯು ಆರಂಭವಾಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾಯರು ವಹಿಸಿದ್ದರು. ಕಾರ್ಯದರ್ಶಿ ಶ್ರೀ ಕೆ. ಸುರೇಶ್ ರಾಯರು ಸ್ವಾಗತಿಸಿದರು. ಅಧ್ಯಕ್ಷರ ಪ್ರಾಸ್ತಾವಿಕ ಮಾತುಗಳ ನಂತರ ಡಾ. ವೈ. ಸುದರ್ಶನ್ ರಾವ್‌ರವರು ಪರಿಷ್ಕೃತ ನಿಯಮಾವಳಿಗಳನ್ನು ಓದಿ ಹೇಳಿದರು. ಹಲವಾರು ವಿಷಯಗಳ ಬಗ್ಗೆ ವಿಸ್ತೃತವಾದ ಚರ್ಚೆಯು ನಡೆದು ಮಂಡಿಸಲಾದ ನಿಯಮಾವಳಿಗಳನ್ನು ಕೆಲವು ಬದಲಾವಣೆಗಳೊಂದಿಗೆ ಸಭೆಯು ಅಂಗೀಕರಿಸಿತು. ಸಲಹೆಗಾರರಾದ ಶ್ರೀ ರಮೇಶ ಶಾನುಭಾಗ್ ಹಾಗೂ ಶ್ರೀ ಬೆಳ್ಮಣ್ ವಾಸುದೇವರಾಯರು ಉಪಸ್ಥಿತರಿದ್ದು ಹಲವಾರು ಸಲಹೆ ಸೂಚನೆಗಳನ್ನು ನೀಡಿದರು. ಕೋಶಾಧಿಕಾರಿಗಳಾದ ಶ್ರೀ ಕೆ.ಸುಧಾಕರ ರಾಯರು ವಂದನಾರ್ಪಣೆ ಮಾಡಿದರು.


ಕರ್ನಾಟಕ ಸೊಸೈಟಿ ಆಕ್ಟ್ ಪ್ರಕಾರ ಈ ನಿಯಮಾವಳಿಗಳು ಎರಡು ಮಹಾಸಭೆಯಲ್ಲಿ ಚರ್ಚೆಗೊಂಡು ಅಂಗೀಕಾರಗೊಳ್ಳಬೇಕು. ಅಂತೆಯೇ ದ್ವಿತೀಯ ವಿಶೇಷ ಮಹಾಸಭೆಯನ್ನು ತಾ.15-04-2018ರಂದು ಕರೆಯಲಾಯಿತು. ಮೊದಲನೆಯ ಮಹಾಸಭೆಯ ನಿರ್ಣಯಗಳನ್ನು ಈ ಮಹಾಸಭೆಯಲ್ಲಿ ಓದಿ ಹೇಳಲಾಯಿತು. ಮಹಾಸಭೆಯು ಈ ನಿರ್ಣಯಗಳಿಗೆ ಮರು ಅಂಗೀಕಾರ ನೀಡಿತು. ಇಲ್ಲಿಗೆ ಪರಿಷ್ಕೃತ ನಿಯಮಾವಳಿಗೆ ಮಹಾಸಭೆಯ ಅಧಿಕೃತ ಅಂಗೀಕಾರದ ಮುದ್ರೆ ಬಿದ್ದಂತಾಯಿತು. ಈ ನಿಯಮಾವಳಿಗಳ ಪುಸ್ತಕವನ್ನು ರಿಜಿಸ್ಟ್ರಾರ್‌ರವರ ಅವಗಾಹನೆಗೆ ಸಲ್ಲಿಸಲಾಗಿದೆ. ಹಾಗೂ ನಿಯಮಾವಳಿ ಪುಸ್ತಕದ ಪ್ರತಿಗಳು ಸಂಘದ ಕಚೇರಿಯಲ್ಲಿ ಲಭ್ಯವಿದೆ. ನಿಯಮಾವಳಿಯ ರಚನೆಗೆ ಸಹಕರಿಸಿದ ಸರ್ವರಿಗೂ ಆಡಳಿತ ಮಂಡಳಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

## ಉಡುಪಿಯಲ್ಲಿ ಶಂಕರ ಜಯಂತಿ



ತಾ.20-04-2018ರಂದು ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಶ್ರೀಶಂಕರ ಜಯಂತಿಯ ಆಚರಣೆಯು ನೆರವೇರಿತು. ಬೆಳಗ್ಗೆ ಎಂಟು ಗಂಟೆಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರಾರ್ಥನೆಯ ಬಳಿಕ ಮಹಿಳಾವೇದಿಕೆಯ ಸದಸ್ಯರಿಂದ ಭಜನಾ ಕಾರ್ಯಕ್ರಮವು ನೆರವೇರಿತು. ನಂತರ ಸ್ವಾಧ್ಯಾಯ ತಂಡದವರಿಂದ ಪಾರಾಯಣ ನಡೆಯಿತು. ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ, ರುದ್ರಾಭಿಷೇಕ ಹಾಗೂ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ ಪಾರಾಯಣದ ನಂತರ ಜ್ಞಾನಭಾರತಿ ಇದರ ಸಹಯೋಗದಲ್ಲಿ ಖ್ಯಾತ ಸಂಸ್ಕೃತ ಹಾಗೂ ಕನ್ನಡ ವಿದ್ವಾಂಸ ಪಾದೆಕಲ್ಲು ವಿಷ್ಣುಭಟ್ಟರಿಂದ "ಭಕ್ತಿಮಾರ್ಗಕ್ಕೆ ಶ್ರೀಶಂಕರಾಚಾರ್ಯರ ಕೊಡುಗೆ" ಎಂಬ ವಿಷಯದ ಬಗ್ಗೆ ಪ್ರವಚನ ನಡೆಯಿತು. ಅವರು, ಸಮುದ್ರದಲ್ಲಿ ಏಳುವ ಅಲೆಗಳು ಹೇಗೆ ಸಮುದ್ರದ ಭಾಗವೋ ಹಾಗೆ "ನಾವು ಪರಮಾತ್ಮ", ಹೇಗೆ ಅಲೆಗಳೇ ಸಮುದ್ರವಲ್ಲವೋ ಹಾಗೆ "ಪರಮಾತ್ಮ ನಾವಲ್ಲ" ಎಂದು ಶ್ರೀ ಶಂಕರರ "ಅಹಂ ಬ್ರಹ್ಮಾಸ್ಮಿ" ಎಂಬ ವಾದವನ್ನು ಹಾಗೂ ನಾವೇ ದೇವರು ಎಂದಾದರೆ ಶ್ರೀ ಶಂಕರರು ದೇವರನ್ನು ಸ್ತುತಿಸಿ ಸ್ತೋತ್ರಗಳನ್ನೇಕೆ ರಚಿಸಿದರು ಎಂಬ ಗೊಂದಲದಲ್ಲಿರುವವರಿಗೆ ಉತ್ತರಿಸಿದರು. ನಂತರ ಮಹಿಳಾವೇದಿಕೆಯವರು ಸಂಗ್ರಹಿಸಿದ ಭಜನೆಗಳ ಮುದ್ರಿತ ಪುಸ್ತಕವನ್ನು ಮಹಿಳಾವೇದಿಕೆಯ ಅಧ್ಯಕ್ಷೆಯಾದ ಶ್ರೀಮತಿ ಜಯಲಕ್ಷ್ಮಿ ಮುರಳೀಧರ ರಾವ್ ಬಿಡುಗಡೆ ಮಾಡಿದರು. ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ವೈ. ಭುವನೇಂದ್ರ ರಾಯರು ಶಂಕರ ತತ್ವದ ಬಗ್ಗೆ ತಿಳಿಸಿದರಲ್ಲದೆ ಪರಿಷ್ಕೃತ ಉಪಾಸನಾ ಮಂಜರಿ-2 ಭಜನೆ ಪುಸ್ತಕದ ರಚನೆಯ ಕಾರ್ಯದಲ್ಲಿ ಸಹಕರಿಸಿದ ಮಂಡಳಿಯ ಎಲ್ಲಾ ಸದಸ್ಯರು, ಮಹಿಳಾ ವೇದಿಕೆಯ ಸದಸ್ಯರು ಮತ್ತು ಭಜನಾ ಮಂಡಳಿಯ ಎಲ್ಲಾ ಸದಸ್ಯರು ಹಾಗೂ ಭಕ್ತಾಭಿಮಾನಿಗಳನ್ನು ಅಭಿನಂದಿಸಿ, ಕೃತಜ್ಞತೆ ಸಲ್ಲಿಸಿದರು. ಶ್ರೀ ಎಸ್.ಎಲ್. ಕಾರ್ಣಿಕರು ಸ್ವಾಗತಿಸಿದರು. ಶ್ರೀ ಐ.ಕೆ. ಜಯಚಂದ್ರ ಧನ್ಯವಾದವಿತ್ತರು. ಡಾ| ವೈ.ಸುದರ್ಶನ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಸಭಾ ಕಾರ್ಯಕ್ರಮದ ನಂತರ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಪೂಜೆಯಾಯಿತು ಹಾಗೂ ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

## ಭಾವಪೂರ್ಣ ಶ್ರದ್ಧಾಂಜಲಿ



**ಪ್ರೊ|| ಕಾರ್ಕಳ ಸೂರ್ಯನಾರಾಯಣ ರಾವ್**

ಜನನ : 18-05-1930 ನಿಧನ : 03-04-2018

**ನಮ್ಮನ್ನಗಲಿದ ನಿಮ್ಮಾತ್ಮಕ್ಕೆ ಚಿರಶಾಂತಿ ಹಾಗೂ ಸದ್ಗತಿಯನ್ನು ಕೋರುವ**

ಇಂದಿರಾ ಎಸ್.ರಾವ್ (ಪತ್ನಿ)
ಡಾ| ಶರತ್ ಕೆ.ರಾವ್ ಹಾಗೂ ನಮಿತಾ ರಾವ್ (ಮಗ-ಸೊಸೆ)
ಡಾ| ಶರಣ್ಯಾ ಭಟ್ ಹಾಗೂ ಶಂಕರ್ ಭಟ್ (ಪುತ್ರಿ-ಅಳಿಯ)
ಡಾ| ಸಂಧ್ಯಾ ಭಟ್ ಹಾಗೂ ಉದಯಶಂಕರ ಭಟ್ (ಪುತ್ರಿ-ಅಳಿಯ)
ಮೊಮ್ಮಕ್ಕಳು, ಸಹೋದರ ಸಹೋದರಿಯರು ಹಾಗೂ ಬಂಧುಮಿತ್ರರು

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಬ್ರಹ್ಮಾಂಡದ ಹುಟ್ಟಿನ ಗುಟ್ಟನ್ನು ತಿಳಿಯುವುದೇ ಅಧ್ಯಾತ್ಮ. ಬ್ರಹ್ಮಾಂಡದ ಹುಟ್ಟಿನ ಗುಟ್ಟನ್ನು ರಟ್ಟು ಮಾಡಲು ವಿಜ್ಞಾನಿಗಳ ತಂಡ ಪ್ರಪಂಚದಾದ್ಯಂತ ಕಾರ್ಯನಿರತವಾಗಿದೆ. ಎಲ್ಲಾ ಧರ್ಮಗಳು ಇದರ ಹುಟ್ಟಿನ ಬಗ್ಗೆ ಹಾಗೂ ಈ ಬ್ರಹ್ಮಾಂಡವು ಕಾರ್ಯವೆಸಗುವ ಬಗ್ಗೆ ತಮ್ಮ ವಾದಗಳನ್ನು ಇತ್ತಿವೆ. ಬ್ರಹ್ಮಾಂಡದ ಗುಟ್ಟು ಪುಸ್ತಕ ಪಾಠಗಳಿಂದ ಕಲಿಯುವಂತಾದ್ದಲ್ಲ, ಅನುಭವಕ್ಕೆ ನಿಲುಕುವಂತಾದ್ದು ಎಂದು ಸನಾತನ ಧರ್ಮಹೇಳುತ್ತದೆ. ಸನಾತನ ಧರ್ಮವನ್ನು ತಿಳಿಯಬೇಕಾದರೆ ವೇದ ಉಪನಿಷತ್ತುಗಳನ್ನು ತಿಳಿಯಲೇಬೇಕು. ವೇದ ಉಪನಿಷತ್ತುಗಳು ಈ ಪ್ರಪಂಚದ ಅತ್ಯಂತ ಪ್ರಾಚೀನ ಗ್ರಂಥಗಳು ಎಂಬುವುದರಲ್ಲಿ ಸಂದೇಹವೇ ಇಲ್ಲ. ವೇದ ಉಪನಿಷತ್ತುಗಳು ಮಾತ್ರವಲ್ಲದೆ ಇಹಲೋಕದ ಪ್ರತಿಯೊಂದು ವಿಷಯಕ್ಕೂ ಸಂಬಂಧಿಸಿದಂತೆ ಸಾವಿರಾರು ಗ್ರಂಥಗಳಿವೆ. ಇವುಗಳನ್ನು ಗ್ರಂಥಗಳು ಎಂದು ಕರೆಯುವುದಕ್ಕಿಂತ ಜ್ಞಾನಭಂಡಾರಗಳೆಂದೇ ಕರೆಯಬೇಕು. ಈ ಜ್ಞಾನಭಂಡಾರಗಳಲ್ಲಿ ಅಡಗಿರುವ ಜ್ಞಾನಸಂಪತ್ತನ್ನು ಹೊರಗೆಳೆಯಬೇಕಾದರೆ ಶ್ರದ್ಧಾಪೂರ್ವಕವಾದ ಅಧ್ಯಯನದಿಂದ ಮಾತ್ರ ಸಾಧ್ಯ. ಸಂಸ್ಕೃತ ಭಾಷೆಯ ಕಲಿಕೆ ಇದರ ಅಧ್ಯಯನಕ್ಕೆ ಇಡಬೇಕಾದ ಮೊದಲನೆಯ ಹೆಜ್ಜೆ. ವೇದಾಧ್ಯಯನವು ಈಗಿನ ಶಾಲಾ ಕಾಲೇಜುಗಳಲ್ಲಿ ಕಲಿಯುವಂತೆ ಬೆಂಚು ಡೆಸ್ಕುಗಳ ಮಧ್ಯೆ ಕಲಿಯುವಂತದ್ದಲ್ಲ. ವೇದಾಧ್ಯಯನವು ಅದರದೇ ಸಂಸ್ಕಾರದ ಚೌಕಟ್ಟಿನಡಿಯಲ್ಲಿ ಕಲಿತರಷ್ಟೇ ಸಿದ್ಧಿಸುವುದು. ಜಾಗತಿಕರಣದ ಭರಾಟೆಯಲ್ಲಿ ನಾಲ್ಕು ಗೋಡೆಗಳ ಫ್ಲ್ಯಾಟ್‌ನಲ್ಲಿ ಬದುಕನ್ನು ಕಳೆದುಕೊಳ್ಳುತ್ತಿರುವ ನಮ್ಮಂತಹಾ ಆಧುನಿಕ ಸ್ಥಾನಿಕ ಬ್ರಾಹ್ಮಣರಿಗೆ ವೇದಪಾಠಗಳ ಸೆಲೆಯಾದ ದೇವಸ್ಥಾನಗಳ ಸಂಪರ್ಕವಿಲ್ಲದಿರುವುದು ದೊಡ್ಡ ಕೊರತೆ. ಇಡೀ ತುಳುನಾಡಿನಲ್ಲಿ ನಮ್ಮವರದೆಂದು ಇರುವುದು ಒಟ್ಟು 36 ದೇವಸ್ಥಾನಗಳು. ಅದರಲ್ಲು ಸಂಪೂರ್ಣ ನಮ್ಮದೇ ಹಿಡಿತದಲ್ಲಿರುವ ದೇವಸ್ಥಾನಗಳು ಬೆರಳೆಣಿಕೆಯವು. ಆದುದರಿಂದ ಈಗಿನ ಮಕ್ಕಳಿಗೆ ದೇವಸ್ಥಾನದ ಪರಿಸರ, ದೇವಸ್ಥಾನದಲ್ಲಿ ನಡೆಯುವ ಪೂಜೆಗಳು, ಬಲಿ, ರಥೋತ್ಸವ, ಅಷ್ಟು ಮಾತ್ರವಲ್ಲದೇ ಮಾಸ, ತಿಥಿ, ನಕ್ಷತ್ರ, ರಾಶಿ ಗೋತ್ರ ಇತ್ಯಾದಿ ಶಬ್ದಗಳ ಅರ್ಥ, ಅರ್ಥಾತ್ ನಮ್ಮ ಸಂಸ್ಕೃತಿಯ ಪರಿಚಯ, ತನ್ಮೂಲಕ ವೈದಿಕ ಲೋಕದ ಇಣುಕು ನೋಟ ಹಾಗೂ ಅಧ್ಯಾತ್ಮಿಕ ಚಿಂತನೆಯ ಸ್ಪರ್ಶ ಪ್ರತಿನಿತ್ಯವು ಸಿಗದು. ಆದುದರಿಂದ ಆಯಾ ಪ್ರದೇಶಗಳಲ್ಲಿನ ನಮ್ಮ ಸಂಘಗಳು ಮುತುವರ್ಜಿವಹಿಸಿ ಮಕ್ಕಳ ರಜಾ ಸಮಯದಲ್ಲಾದರೂ ತಮ್ಮ ಪ್ರದೇಶದಲ್ಲಿರುವ ನಮ್ಮ ದೇವಸ್ಥಾನಗಳನ್ನು ಕೇಂದ್ರವಾಗಿಟ್ಟು ನಮ್ಮ ಸಂಸ್ಕೃತಿಯನ್ನು ನಮ್ಮವರಿಗೆ ಪರಿಚಯಿಸುವ ಕೆಲಸವನ್ನು ಮಾಡಬೇಕು.

ಈ ನಿಟ್ಟಿನಲ್ಲಿ ಮುಂಚಿನಿಂದಲೂ (1970–80ರ ಆಸುಪಾಸಿನಲ್ಲಿ) ಹೆಜಮಾಡಿಯ ಪಾಠಾಳಿ ಮನೆ ಹಾಗೂ ಪದ್ಮಾವತಿ ಭವನ (ಇಪ್ಪೆಯಿಲ್ಲ)ದಲ್ಲಿ ವೇದಮೂರ್ತಿ ಶ್ರೀ ನಾರಾಯಣ ಭಟ್ಟರ ಮುತುವರ್ಜಿಯಲ್ಲಿ ವೈದಿಕ ಶಿಬಿರಗಳು ನಡೆಯುತ್ತಿದ್ದವು. ನಂತರ ಇದು ಪಾವಂಜೆ ದೇವಸ್ಥಾನದಲ್ಲಿ ಮುಂದುವರೆಯಿತು. ಸುಳ್ಯದಲ್ಲಿ ಸುಮಾರು ವರ್ಷಗಳ ಕಾಲ ಶ್ರೀ ಆತ್ಮಾರಾಮ ಶಾಸ್ತ್ರಿಗಳು (ಪ್ರಸ್ತುತ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಗಳು) ವೇದ ಪಾಠಶಾಲೆಯನ್ನು ನಡೆಸಿದರು. ಕಾಲಕ್ರಮೇಣ ವೈದಿಕ ಶಿಬಿರದಲ್ಲಿ ನಿಧಾನವಾಗಿ ವಟುಗಳ ಭಾಗವಹಿಸುವಿಕೆ ಕಡಮೆಯಾಗಿ ನಡೆಸುವವರಿಗೂ ಉತ್ಸಾಹ ಕಡಮೆಯಾಯಿತೆಂದು ತೋರುತ್ತದೆ. ಆದರೆ ಈಗ ಪುನಃ ವೈದಿಕಶಿಬಿರದ ಪ್ರಾಮುಖ್ಯತೆಯನ್ನು ಮನಗಂಡು ಪಡುಬಿದ್ರೆ ಸಂಘದವರು ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನದಲ್ಲಿ ವೈದಿಕ ಶಿಬಿರವನ್ನು ಪುನಃ ಆರಂಭಿಸಿರುವುದು. ಪ್ರಶಂಸನೀಯ. ಪ್ರಸ್ತುತ ಐದನೇ ವರ್ಷಕ್ಕೆ ಈ ಶಿಬಿರ ಕಾಲಿಟ್ಟಿದೆ.

ವೈದಿಕ ಪಾಠವೇ ಆಗಲಿ ಆಧ್ಯಾತ್ಮವೇ ಆಗಲಿ ಅದಕ್ಕೆ ಸಂಸ್ಕೃತ ಭಾಷೆಯೇ ಜೀವನಾಡಿ. ಇವುಗಳನ್ನು ಆಸಕ್ತಿಯಿಂದ ಕಲಿಯುವುದಾದರೆ ಸಂಸ್ಕೃತ ಕಲಿಯಲೆಬೇಕು. ಭಾರತೀಯ ಸಂಸ್ಕೃತಿಯಲ್ಲಿ ವೇದ ಪಾಠಗಳು ಎಷ್ಟು ಮುಖ್ಯವೋ ಸಂಗೀತ ನೃತ್ಯ, ಭಜನೆ, ಯಕ್ಷಗಾನಗಳೂ ಅಷ್ಟೇ ಮುಖ್ಯ. ನಾನಾಕಾರಣಗಳಿಂದಾಗಿ, ಮುಖ್ಯವಾಗಿ ಇಂಗ್ಲೀಷು ಮಾಧ್ಯಮದಿಂದಾಗಿ ನಮ್ಮ ಮಕ್ಕಳು ಇಂತಹಾ ಒಂದು ಜ್ಞಾನಭಂಡಾರದ ತಿಜೋರಿಯ ಬಳಿಯಲ್ಲಿಯೇ ಬೆಳೆಯುತ್ತಿದ್ದರೂ ಅದರ ಅರಿವೇ ಇಲ್ಲದಂತಿರುವುದು ದುಃಖದ ಸಂಗತಿ. ಅದರೆ ಅದು ನಮ್ಮ ಆಧುನಿಕ ಜೀವನ ಶೈಲಿಯ ಅನಿವಾರ್ಯತೆ.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಹಾಗಾಗಿ ನಮ್ಮ ಸಂಸ್ಕೃತಿಯನ್ನು ಕಲಿಯಲಿಕ್ಕಾಗಿ ಪ್ರತೀ ಊರಿನಲ್ಲಿಯೂ ದೇವಸ್ಥಾನವೊಂದರ ಪರಿಸರದಲ್ಲಿ ಸನಾತನ ಧರ್ಮ ಪಾಠಶಾಲೆಯೊಂದನ್ನು ಆರಂಭಿಸುವ ಅಗತ್ಯ ನಮ್ಮ ಹಿಂದೂ ಸಮಾಜಕ್ಕಿದೆ. ಭಾರತೀಯ ಸಂಸ್ಕೃತಿಯ ಸಂಗೀತ, ನೃತ್ಯ , ಕಲೆ, ಶಿಲ್ಪ, ಭಜನೆ, ವಾಸ್ತು, ಯೋಗ, ಜ್ಯೋತಿಷ್ಯ, ವೈದಿಕ, ಸಂಸ್ಕೃತ ಇವೆಲ್ಲವನ್ನು ಅರೆಕಾಲಿಕ (ಸಂಜೆಯ ಹೊತ್ತು) ಅಥವಾ ಸಾಧ್ಯವಾದರೆ ಪೂರ್ಣಕಾಲಿಕವಾಗಿ ಕಲಿಯಲು ಇಂತಹ ಶಾಲೆಗಳನ್ನು ದೇಶದೆಲ್ಲೆಡೆ ಸ್ಥಾಪಿಸುವ ಅಗತ್ಯ ಕಾಣುತ್ತಿದೆ. ಇದನ್ನು ಸ್ವಾತಂತ್ರ್ಯನಂತರ ರಾಷ್ಟ್ರ ಭಾಷೆ ಹಿಂದಿಯನ್ನು ರಾಷ್ಟ್ರದಾದ್ಯಂತ ಕಲಿಸಲು ಕೈಗೊಂಡ ಕ್ರಮಕ್ಕೆ ಹೋಲಿಸಬಹುದು. ನಾವು ಮುತುವರ್ಜಿ ವಹಿಸಿ ಇಂತಹಾ ನಮ್ಮ ಸಂಸ್ಕೃತಿಯನ್ನು ಕಲಿಸುವ ವಿದ್ಯಾಲಯ ವೊಂದನ್ನು ಮೊತ್ತಮೊದಲಿಗೆ ಸ್ಥಾಪಿಸುವ ಹೆಗ್ಗಳಿಕೆ ಪಡೆಯುವಂತಾಗಲಿ. ಈ ನಿಟ್ಟಿನಲ್ಲಿ ಪಡುಬಿದ್ರೆಯ ಪಾದೆಬೆಟ್ಟಿನಲ್ಲಿ ಆರಂಭವಾದ ಶಿಬಿರ ಬೆಳೆಯಲಿ ಎಂಬ ಹಾರೈಕೆ ನಮ್ಮದು.

ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-32

## ಕೋಟೇಕಾರು ಶ್ರೀ ಶೃಂಗೇರಿ ಮಠ, ಕೋಟೆಕಾರು, ಮಂಗಳೂರು



ಸ್ಥಾನಿಕ ಬ್ರಾಹ್ಮಣರ ಗುರುಪೀಠವಾದ ಶ್ರೀ ಶೃಂಗೇರಿ ಮಠದ ಶಾಖಾಮಠವಿದು. ಮಂಗಳೂರಿನಿಂದ ಕಾಸರಗೋಡಿಗೆ ಹೋಗುವ ಹೆದ್ದಾರಿಯಲ್ಲಿ ಮಂಗಳೂರಿನಿಂದ ಸುಮಾರು ಹದಿನೈದು ಕಿ.ಮಿ. ದೂರದಲ್ಲಿ ಹೆದ್ದಾರಿಯ ಬಲಭಾಗದಲ್ಲಿ ಸುಮಾರು ಒಂದೂವರೆ ಎಕ್ರೆ ವಿಸ್ತೀರ್ಣದಲ್ಲಿ ಈ ಮಠವಿದೆ. 1920ರ ದಶಕದಲ್ಲಿ ಅದ್ವೈತ ಸಮಿತಿಯ ಮುತುವರ್ಜಿಯಲ್ಲಿ ಈ ಮಠವು ಸ್ಥಾಪಿತವಾಯಿತು. ನಂತರ ಶ್ರೀ ಶೃಂಗೇರಿ ಮಠಕ್ಕೆ ಹಸ್ತಾಂತರವಾಯಿತು. ಅಂದಿನಿಂದ ಈ ಕ್ಷೇತ್ರದ ಧರ್ಮಾಧಿಕಾರಿಯಾಗಿ ನಮ್ಮ ಸಮಾಜದ ಧುರೀಣರಾದ ಶ್ರೀ ಸತ್ಯಶಂಕರ ಬೊಳ್ಳಾವರವರು ಗುರುಗಳಿಂದ ನಿಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿಶಾಲವಾದ ಮಂಗಳೂರು ಹೆಂಚಿನ 19ನೇ ಶತಮಾನ ಕಟ್ಟಡಗಳ ವಿನ್ಯಾಸದಲ್ಲಿರುವ ಈ ಕಟ್ಟಡದಲ್ಲಿ ಗುರುಗಳಿಗೆ ಉಳಿದುಕೊಳ್ಳಲು ಗುರುನಿವಾಸ, ಪೂಜಾಕೊಠಡಿ, ಸಭಾಗೃಹ, ವೇದ ಪಾಠ ಶಾಲೆ, ಭೋಜನಾಲಯ ಹಾಗೂ ಅತಿಥಿಗಳಿಗೆ ಉಳಿದುಕೊಳ್ಳಲು ಕೋಣೆಗಳಿವೆ. ಮಠದ ಆವರಣದಲ್ಲಿ ಗಣಪತಿ, ಶಾರದೆ ಹಾಗೂ ಶಂಕರಾಚಾರ್ಯರ ಗುಡಿಗಳಿವೆ. ಗೌರಿಪೂಜೆ, ಗಣೇಶಚತುರ್ಥಿ, ನವರಾತ್ರಿ, ಶಂಕರಜಯಂತಿ ಹಬ್ಬಗಳ ಆಚರಣೆಗಳು ಇಲ್ಲಿ ವಿಜೃಂಭಣೆಯಿಂದ ನೆರವೇರುತ್ತದೆ. ಮಠದ ಆವರಣದಲ್ಲಿರುವ ದೇವಾಲಯಗಳಿಗೆ ನಿತ್ಯಪೂಜೆ ಹಾಗೂ ವಿಶೇಷ ದಿನಗಳಂದು ವಿಶೇಷ ಸೇವೆ ನಡೆಯುತ್ತದೆ. ಈ ಮಠದಲ್ಲಿ ಸಂಗೀತ ನೃತ್ಯ ಇತ್ಯಾದಿ ಭಾರತೀಯ ಕಲೆಗಳಿಗೆ ಪ್ರೋತ್ಸಾಹ ನೀಡಲು ಶ್ರೀ ಶಾರದಾ ಸಂಗೀತ ವಿದ್ಯಾಲಯವು ಕಾರ್ಯಾಚರಿಸುತ್ತಿದೆ. ಸ್ಥಾನಿಕ ಬ್ರಾಹ್ಮಣರು ಪ್ರತೀವರ್ಷ ಚಾತುರ್ಮಾಸ್ಯ ಸಮಯ ಶೃಂಗೇರಿ ಜಗದ್ಗುರುಗಳನ್ನು ಭೇಟಿಯಾಗಲು ಈ ಮಠದ ಧರ್ಮಾಧಿಕಾರಿಗಳಾದ ಶ್ರೀ ಸತ್ಯಶಂಕರ ಬೊಳ್ಳಾವರವರ ನೇತೃತ್ವದಲ್ಲಿ ತೆರಳುತ್ತಾರೆ. ಮಂಗಳೂರು ಹಾಗೂ ಕೇರಳದ ಉತ್ತರ ಜಿಲ್ಲೆಗಳ ಆಸುಪಾಸಿನ ಹಿಂದೂ ಧರ್ಮೀಯರನ್ನು ಸಂಘಟಿಸಿ ಶಂಕರತತ್ವ ಪ್ರಚಾರ ಅಭಿಯಾನವನ್ನು ಶ್ರೀಮಠವು ನೆರವೇರಿಸುತ್ತಿದೆ. ಹೀಗೆ ನಮ್ಮವರು ಧರ್ಮಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ಏಕೈಕ ಶೃಂಗೇರಿ ಶಾಖಾಮಠವಾದ ಈ ಕೋಟೆಕಾರು ಮಠವು ಸ್ಥಾನಿಕರಿಗೆ ಹೆಮ್ಮೆಯ ಕೇಂದ್ರವಾಗಿದೆ. ಈ ಕೇಂದ್ರದೊಂದಿಗೆ ಸ್ಥಾನಿಕ ಬ್ರಾಹ್ಮಣರು ಇನ್ನಷ್ಟು ಸಂಬಂಧವನ್ನು ಬೆಳೆಸಿಕೊಂಡು ಶ್ರೀ ಶೃಂಗೇರಿ ಮಠಕ್ಕೆ ನಾವು ಇನ್ನಷ್ಟು ಹತ್ತಿರವಾಗಬೇಕು. ಹೆಚ್ಚಿನ ಮಾಹಿತಿಗಾಗಿ ಶ್ರೀ ಸತ್ಯಶಂಕರ ಬೊಳ್ಳಾವರನ್ನು 8088028048ರಲ್ಲಿ ಸಂಪರ್ಕಿಸಬಹುದು.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | |
|---|---|
| ವಾಹನ ಸಾಲ | 12% |
| ಹಳೆಯ ವಾಹನ | 13.5% |
| ಆಭರಣ ಸಾಲ | 12% |
| ವೈಯಕ್ತಿಕ ಸಾಲ | 16% |
| ಶಿಕ್ಷಣ ಸಾಲ | 12% |
| ಅಡಮಾನ ಸಾಲ | 12.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | 5% | ನಿತ್ಯನಿಧಿ ಠೇವಣಿ | 5% |
| 46 ದಿನಗಳಿಂದ 364 ದಿನಗಳು | 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010–11 ರಿಂದ 2015–16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com


**JALAJA SKIN CARE AND COSMETOLOGY CLINIC**

Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)



# ಕೊಂಕಣಿ ಖಾರ್ವಿಸ್ ಆಫ್ ಕರ್ನಾಟಕ

- ವೈ. ಮೋಹನ ರಾವ್




''ಕೊಂಕಣಿ ಖಾರ್ವಿಸ್ ಆಫ್ ಕರ್ನಾಟಕ''-ಎ ಸೊಶಿಯೋ ಇಕಾನಮಿಕ್ ಸರ್ವೇ ರಿಪೋರ್ಟ್''-ಕರ್ನಾಟಕದ ಕೊಂಕಣಿ ಖಾರ್ವಿಯರ ಒಂದು ಸಾಮಾಜಿಕ-ಆರ್ಥಿಕ ಸಮೀಕ್ಷಾ ವರದಿಯನ್ನು ಗ್ರಂಥ ರೂಪದಲ್ಲಿ ನೀಡಿದವರು ಡಾ। ವೈ. ರವೀಂದ್ರನಾಥ ರಾವ್. ಇವರ ಸಹೋದರ ಡಾ। ವೈ. ಅವನೀಂದ್ರನಾಥ ರಾವ್. ''ದೆಹಲಿಯ ಕನ್ನಡ ಜಗತ್ತಿನಲ್ಲಿ'' ಸಹಿತ ಹಲವು ಕೃತಿಗಳನ್ನು ನೀಡಿದ ಕೀರ್ತಿ ಡಾ। ವೈ. ಅವನೀಂದ್ರ ನಾಥ್ ರಾವ್ ಅವರಿಗೆ ಸಲ್ಲುತ್ತದೆ. ನನ್ನ ಆರನೇಯ ಕೃತಿ ''ಅತ್ತ ಇತ್ತ ಸುತ್ತಮುತ್ತ''ದಲ್ಲಿ ಪ್ರೀತಿಯ ಶುಭ ಸಂದೇಶವನ್ನು ಇವರು ನೀಡಿರುತ್ತಾರೆ.

ಡಾ। ವೈ.ರವೀಂದ್ರನಾಥ ರಾವ್ ಸೋಶಿಯಾಲಜಿಯಲ್ಲಿ ಎಂ.ಎ. ಮತ್ತು ''ಗಾಂಧೀಯನ್ ಸ್ಟಡೀಸ್''ನಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಸ್ನಾತಕೋತರ ಪದವಿಯನ್ನು ಪಡೆದಿರುತ್ತಾರೆ. 1995ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪಡೆದಿರುತ್ತಾರೆ. 36 ವರ್ಷಗಳ ಸೇವೆಯನ್ನು ಅವರು ಸ್ಟೆಂಟ್ ಮೇರೀಸ್ ಸಿರಿಯನ್ ಕಾಲೇಜಿನಲ್ಲಿ ಸಲ್ಲಿಸುತ್ತಾ ಪ್ರೊಫೆಸರ್ ಮತ್ತು ಸೋಶಿಯಾಲಜಿ ಡಿಪಾರ್ಟ್‌ಮೆಂಟಿನ ಮುಖ್ಯಸ್ಥರಾಗಿ, ಉಪಪ್ರಾಂಶುಪಾಲರಾಗಿ ಮತ್ತು ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಡಾ। ರಾವ್‌ರವರು 2016ರಲ್ಲಿ ನಿವೃತ್ತಿ ಹೊಂದಿದರು. ಸೇವೆಯಲ್ಲಿರುವಾಗ 50ಕ್ಕೂ ಹೆಚ್ಚು ವಿಷಯ ಮಂಡನೆ ಮತ್ತು 15ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ಇವರು ಸಮೀಕ್ಷಾ ನಿರ್ದೇಶಕರಾಗಿ ಮತ್ತು ಲೇಖಕರಾಗಿ ಅಧ್ಯಯನ ನಡೆಸಿದ್ದರು. ಪ್ರಸ್ತುತ ಗ್ರಂಥವು ಜಾಗತಿಕ ಕೊಂಕಣಿ ಕೇಂದ್ರದಿಂದ ಪ್ರಕಾಶನಗೊಂಡಿದೆ. ಇದು ಆಂಗ್ಲಭಾಷೆಯಲ್ಲಿ ಪ್ರಕಟಣೆಯಾಗಿದೆ.

ಖ್ಯಾತ ಛಾಯಾಚಿತ್ರಕರಾದ 'ಅನ್ನು ಮಂಗಳೂರು' ಇವರ ಅನೇಕ ಸೊಗಸಾದ ಚಿತ್ರಗಳನ್ನು ಈ ಗ್ರಂಥ ಒಳಗೊಂಡಿದೆ. ಮುಖಪುಟದಲ್ಲಿ ಎರಡು ಮೀನುಗಳನ್ನು ಹಿಡಕೊಂಡ ಕೊಂಕಣಿ ಖಾರ್ವಿ ಮಹಿಳೆಯ ಆಕರ್ಷಕ ಚಿತ್ರವಿದೆ. ಈ ಕೃತಿಯಲ್ಲಿ ಅನೇಕ ಚಿತ್ರಗಳು, ಚಾರ್ಟ್‌ಗಳು, ದೋಣಿ ಮತ್ತು ಮೀನುಗಳು, ಕಾರ್ಯಕ್ರಮಗಳ ಚಿತ್ರಗಳನ್ನು ಸೇರಿಸಲಾಗಿದೆ.

Forward by T.V.Mohandas Pai, Patron Trustee, World Konkani Centre - The Kharvis are one among the several other Konkani speaking communities originally migrated from Goa and are mainly engaged in their traditional occupation of fishing.

It was in 2012, a group of Kharvi leaders invited us to visit their villages near Kundapura in Karnataka. During our visit we could see the level of poverty the community is living in. Despite the magnitude of the poverty faced by the community, Kharvi people told us "We dont want your money, please help us to come into the mainstream. Help us to empower ourselves."

ಬಸ್ತಿ ವಾಮನ ಶೆಣೈ, ಅಧ್ಯಕ್ಷರು, ವಿಶ್ವ ಕೊಂಕಣಿ ಕೇಂದ್ರ ; ಕೆ.ಬಿ.ಖಾರ್ವಿ, ಅಧ್ಯಕ್ಷರು, ಅಖಿಲಭಾರತ ಕೊಂಕಣಿ ಖಾರ್ವಿ ಮಹಾಜನ ಸಭಾ, ಗುರುದತ್ ಬಂಟ್ವಾಕರ್, ಅಸಿಸ್ಟೆಂಟ್ ಡೈರೆಕ್ಟರ್, ಕೊಂಕಣಿ ಭಾಷಾ ಜಾಗತಿಕ ಸಂಸ್ಥೆ ಇವರೆಲ್ಲರ ಸಂದೇಶಗಳು ಈ ಕೃತಿಯಲ್ಲಿ ಸೇರಿವೆ.

ಕೃತಿ : ಕೊಂಕಣಿ ಖಾರ್ವಿಸ್ ಆಫ್ ಕರ್ನಾಟಕ -ಎ ಸೊಶಿಯೋ ಇಕಾನಮಿಕ್ ಸರ್ವೇ ರಿಪೋರ್ಟ್
ಲೇಖಕರು : **ಡಾ। ವೈ. ರವೀಂದ್ರನಾಥ ರಾವ್**
ಪ್ರಕಾಶನ : **ಕೊಂಕಣಿ ಬಸ್ ಆನಿ ಸಂಸ್ಕೃತಿ ಪ್ರತಿಷ್ಠಾನ್, ವರ್ಲ್ಡ್ ಕೊಂಕಣಿ ಸೆಂಟರ್, ಮಂಗಳೂರು.** ಆರ್ಥಿಕ ನೆರವು : **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ**

ಮೀನುಗಾರಿಕೆ (Fishing) ಕರ್ನಾಟಕದ ಕೊಂಕಣಿ ಖಾರ್ವಿಯರ ಮುಖ್ಯ ಕಸುಬು. ಖಾರ್ವಿಯವರು ದೀರ್ಘ ಕಾಲದವರೆಗೆ ಮೀನುಗಾರಿಕೆ ಕಸುಬನ್ನು ಮಾಡುತ್ತಿದ್ದಾರೆ ಎಂಬುದನ್ನು ಚಾರಿತ್ರಿಕ ದಾಖಲೆಗಳು ಮತ್ತು ಮೂಲಗಳು ತೋರಿಸುತ್ತವೆ. ಮೀನುಗಾರಿಕೆ ವಿಧಾನಗಳು ಪರಂಪರಾಗತವಾದರೂ ಇತ್ತೀಚೆಗಿನ ವರ್ಷಗಳಲ್ಲಿ ಅವರು ಹೆಚ್ಚು ಯಾಂತ್ರಿಕ ವಿಧಾನಗಳನ್ನು ಉಪಯೋಗಿಸುತ್ತಿದ್ದಾರೆ. ಪರಂಪರೆಯಿಂದ ಮಹಿಳೆಯರು, ಗಂಡಸರಿಗೆ ಕೆಲಸದಲ್ಲಿ ಸಹಾಯ ಮಾಡುತ್ತಾರೆ. ಉದಾಹರಣೆಗಾಗಿ ಮೀನುಗಳನ್ನು ದೋಣಿಯಿಂದ ವಾಹನಗಳಿಗೆ ಬದಲಾಯಿಸುವುದು ಅಥವಾ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದು ಇತ್ಯಾದಿ. ಖಾರ್ವಿಯರು ಧೀರರು, ಶ್ರಮಜೀವಿಗಳು, ಧಾರ್ಮಿಕ ಬೀರುಗಳು, ದೈವಭಕ್ತಿಯುಳ್ಳವರು ಮತ್ತು ಅತಿಥಿಸತ್ಕಾರಕ್ಕೆ ಹೆಸರಾದವರು.

ಖಾರ್ವಿಯವರು 'ಧಾರೆ' (Pouring of water) ಮದುವೆಯ ವ್ಯವಸ್ಥೆಯನ್ನು ಹೆಚ್ಚಿನ ಹಿಂದೂಗಳ ಹಾಗೆ ಪರಿಪಾಲಿಸುತ್ತಾರೆ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಖಾರ್ವಿಯವರ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳನ್ನು ಎರಡು ವಿಭಾಗಗಳಾಗಿ ಮಾಡಲಾಗಿದೆ. ಮೊದಲ ವಿಭಾಗದಲ್ಲಿ ಖಾರ್ವಿಯವರ ಜನಸಂಖ್ಯೆ ಮತ್ತು ಸಾಮಾಜಿಕ ವಿಚಾರಗಳ ಬಗ್ಗೆ ಕೊಡಲಾಗಿದೆ. ಎರಡನೇ ವಿಭಾಗದಲ್ಲಿ ಖಾರ್ವಿಯವರ ಆರ್ಥಿಕ ಮಟ್ಟವನ್ನು ವಿವೇಚಿಸಲಾಗಿದೆ. ಭಾರತದಲ್ಲಿ ಹೆಚ್ಚು ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳಲ್ಲಿ ಚಿನ್ನ ಅಗತ್ಯವಾಗಿ ಉಪಯೋಗಿಸಲ್ಪಡುತ್ತದೆ. ಇದು ಖಾರ್ವಿಯುವರ ವ್ಯವಸ್ಥೆಯಲ್ಲೂ ಇದೆ. ಕುಟುಂಬದ 4838 (77.7%) ಖಾರ್ವಿಯವರು ಚಿನ್ನದ ಆಶ್ರಯದಲ್ಲಿರುತ್ತಾರೆ. ಆದರೆ ಕುಟುಂಬದ ಕಾಲು ಅಂಶ ಸದಸ್ಯರು ಅಂದರೆ 1388 (22.3%) ಖಾರ್ವಿಯವರ ಬಳಿ ಬಂಗಾರ ಇರುವುದಿಲ್ಲ. ಖಾರ್ವಿಯವರು (74.3) ಉಳಿತಾಯ ಖಾತೆಗಳನ್ನು ಹೊಂದಿರುತ್ತಾರೆ. ಕುಟುಂಬದ ಸದಸ್ಯರು (25.7) ವಿಮಾ ಪಾಲಿಸಿಗಳನ್ನು ಖರೀದಿಸಿರುತ್ತಾರೆ.

ಸಮೀಕ್ಷಾ ನಿರ್ದೇಶಕರಾದ ಡಾ। ವೈ. ರವೀಂದ್ರನಾಥ ರಾವ್ ಅವರ ಒಂದು ಪ್ರಮುಖ ಗ್ರಂಥ ಇದಾಗಿದೆ. ಕರ್ನಾಟಕದ ಕೊಂಕಣಿ ಖಾರ್ವಿಯವರ ಸಮಾಜದ ಸಮಗ್ರ ಮಾಹಿತಿಯನ್ನು ಇದು ನೀಡುತ್ತದೆ. ಡಾ। ವೈ. ರವೀಂದ್ರನಾಥ ರಾವ್‌ರವರಿಗೆ ಅಭಿನಂದನೆಗಳು.



## ಕಾರ್ಕಳದಲ್ಲಿ ಶಂಕರ ಜಯಂತಿ

ಕಾರ್ಕಳ ಶ್ರೀಶಂಕರ ಪ್ರತಿಷ್ಠಾನದ ವತಿಯಿಂದ ತಾ.22-04-2018ರಂದು ಶ್ರೀ ಶಂಕರ ಜಯಂತಿ ಯನ್ನು ಆಚರಿಸಲಾಯಿತು. ಶ್ರೀ ಶಂಕರಾಚಾರ್ಯರ ಚಿತ್ರಕ್ಕೆ ಪೂಜೆ ಸಲ್ಲಿಸಿ ಅಷ್ಟೋತ್ತರ ಪಾರಾಯಣ ನಡೆಸಲಾಯಿತು. ಬ್ರಹ್ಮಶ್ರೀ ನಿರಂಜನ ಭಟ್ ಹಾಗೂ ಶ್ರೀ ಎಂ.ಆರ್.ವಾಸುದೇವ ಇವರು ಅತಿಥಿಗಳಾಗಿ ಆಗಮಿಸಿ ಶಂಕರಾಚಾರ್ಯರ ಬಗ್ಗೆ ತಮ್ಮ ವಿಚಾರಧಾರೆಗಳನ್ನು ತಿಳಿಸಿದರು.

## ಸುರತ್ಕಲ್‌ನಲ್ಲಿ ಶಂಕರ ಜಯಂತಿ

ಸುರತ್ಕಲ್ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ವತಿಯಿಂದ ತಾ.22-04-2018ರಂದು ಶಂಕರ ಜಯಂತಿಯನ್ನು ಸುರತ್ಕಲ್‌ನ ವಿವೇಕಾನಂದ ಸಭಾಗೃಹದಲ್ಲಿ ನೆರವೇರಿಸಲಾಯಿತು. ಆ ಪ್ರಯುಕ್ತ ಡಾ। ನರೇಶ್ ರಾವ್ ಬಜ್ಪೆ ಇವರ ಪುತ್ರಿಯರಾದ ಕು। ವೈಷ್ಣವಿ ಹಾಗೂ ವೈಭವಿಯವರಿಂದ ಶ್ರೀಕ್ಷೇತ್ರ ಕಟೀಲು ಮಹಾತ್ಮೆ ಎಂಬ ಹರಿಕಥೆ ನಡೆಯಿತು. ಸೂರಿಕುಮೇರು ಚಂದ್ರಶೇಖರ್ ರಾವ್ ಹಾಗೂ ಓಂಪ್ರಕಾಶರಾವ್ ಪಕ್ಕವಾದ್ಯದಲ್ಲಿ ಸಹಕರಿಸಿದರು. ಶ್ರೀಶಂಕರಾಚಾರ್ಯರ ಚಿತ್ರಕ್ಕೆ ಪೂಜೆ ಸಲ್ಲಿಸಿ ಅಷ್ಟೋತ್ತರ ಶತನಾಮ ಪಾರಾಯಣ ನಡೆಸಲಾಯಿತು.

## ಪಡುಬಿದ್ರಿಯಲ್ಲಿ ಶಂಕರ ಜಯಂತಿ

ಪಡುಬಿದ್ರಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ವತಿಯಿಂದ ತಾ.22-04-2018ರಂದು ಶಂಕರ ಜಯಂತಿಯನ್ನು ಬಾಲಗಣಪತಿ ದೇವಸ್ಥಾನದಲ್ಲಿ ನೆರವೇರಿಸಲಾಯಿತು. ಶ್ರೀಶಂಕರಾಚಾರ್ಯರ ಚಿತ್ರಕ್ಕೆ ಪೂಜೆ ಸಲ್ಲಿಸಿ ಅಷ್ಟೋತ್ತರ ಶತನಾಮ ಪಾರಾಯಣ ನಡೆಸಲಾಯಿತು. ಪಾದೆಬೆಟ್ಟು ದೇವಸ್ಥಾನದ ವೈದಿಕ ಶಿಬಿರದ ವಟುಗಳು ಈ ಸಮಾರಂಭದಲ್ಲಿ ಭಾಗವಹಿಸಿದರು. ಶ್ರೀ ಪಾವಂಜೆ ಜಗದೀಶ ಉಪಾಧ್ಯಾಯರವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು. ಪಡುಬಿದ್ರಿ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

## ಪಡುಬಿದ್ರಿ ಸಂಘದ ಪ್ರವಾಸ



ಪಡುಬಿದ್ರಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾದವರು ಇತ್ತೀಚಿಗೆ ಉಡುಪಿ ಕೆಮ್ಮಣ್ಣಿನ ರೆಸಾರ್ಟ್‌ಗೆ ಶ್ರೀ ಎಮ್.ಕೆ.ದಿವಾಕರ ರಾವ್ ಹಾಗೂ ಶ್ರೀ ಜನಾರ್ದನ ರಾಯರ ನೇತೃತ್ವದಲ್ಲಿ ಪ್ರವಾಸವನ್ನು ಕೈಗೊಂಡರು. ಸುಮಾರು 50 ಜನ ಸಮಾಜ ಬಾಂಧವರು ಭಾಗವಹಿಸಿದ್ದರು.

## ಬೆಳ್ತಂಗಡಿಯಲ್ಲಿ ಶತ ರುದ್ರಾಭಿಷೇಕ

ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬೆಳ್ತಂಗಡಿ ಇದರ ವತಿಯಿಂದ ತಾ.06-05-2018 ರಂದು ಶತರುದ್ರಾಭಿಷೇಕ ಹಾಗೂ 07-05-2018ರಂದು ಶತರುದ್ರೀಯ ಹೋಮಗಳು ಬ್ರಹ್ಮಶ್ರೀ ಜಗದೀಶ ಭಟ್ಟರ ನೇತೃತ್ವದಲ್ಲಿ ಲಾಯಿಲ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ನೆರವೇರಿತು. ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಧನಂಜಯಕುಮಾರ್‌ರವರ ಮುತುವರ್ಜಿಯಲ್ಲಿ ಕಾರ್ಯಕ್ರಮವು ವಿಶೇಷವಾಗಿ ಮೂಡಿಬಂದಿತು.

## ವೃಷಭ ಮಾಸದ ವಿಶೇಷ ದಿನಗಳು

| | |
|---|---|
| **14-05-2018** | ವೃಷಭ ಸಂಕ್ರಮಣ |
| **15-05-2018** | ಅಮಾವಾಸ್ಯೆ |
| **16-05-2018** | ಗ್ರೀಷ್ಮ ಋತು ಅಧಿಕ ಜೇಷ್ಠಾ ಮಾಸ ಶುಕ್ಲಪಕ್ಷಾರಂಭ |
| **25-05-2018** | ಸರ್ವೈಕಾದಶಿ |
| **29-05-2018** | ಜ್ಯೇಷ್ಠ ಮಾಸದ ಹುಣ್ಣಿಮೆ |
| **30-05-2018** | ಗ್ರೀಷ್ಮ ಋತು ಅಧಿಕ ಜೇಷ್ಠಾ ಮಾಸದ ಕೃಷ್ಣಪಕ್ಷಾರಂಭ |
| **02-06-2018** | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 10.02 |
| **10-06-2018** | ಸರ್ವೈಕಾದಶಿ |
| **13-06-2018** | ಅಮಾವಾಸ್ಯೆ |
| **14-06-2018** | ಗ್ರೀಷ್ಮ ಋತು ನಿಜ ಜೇಷ್ಠಾ ಮಾಸ ಶುಕ್ಲಪಕ್ಷಾರಂಭ |
| **15-06-2018** | ಮಿಥುನ ಸಂಕ್ರಮಣ |

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

With Best Compliments From :

Ph : 98459 92859

**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.

# ಧಾರ್ಮಿಕ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀ ಶಾರದಾಪೀಠದ ಕೊಡುಗೆ

– ಡಾ।ಎಚ್.ವಿ.ನರಸಿಂಹಮೂರ್ತಿ, ಕುಂದಾಪುರ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು...)

ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನದ ಅಂಗವಾಗಿ ರಾಜ್ಯಾದ್ಯಂತ ಮತ್ತು ನೆರೆಯ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳದ ಅನೇಕ ಕೇಂದ್ರಗಳಲ್ಲಿ ಶ್ರೀಶಂಕರಾಚಾರ್ಯ ಅಷ್ಟೋತ್ತರ ಶತನಾಮಪುಜ್ಞ, ಗುರುಸಪರ್ಯಾ, ಗಾಯತ್ರೀ–ಲಲಿತಾ ಉಪಾಸನೆ, ಮಾನಸಪೂಜಾ–ಇತ್ಯಾದಿಗಳು ನಡೆಯುತ್ತಿವೆ. ಕೆಲವು ಕೇಂದ್ರಗಳಲ್ಲಿ ಭಜನೆ ಸ್ತೋತ್ರ ಪಾಠಗಳನ್ನು ನಡೆಸಲಾಗುತ್ತಿದೆ.

**ಆರೋಗ್ಯಕ್ಷೇತ್ರ**

ಇಂದಿನ ಜನತೆಯ ಅವಶ್ಯಕತೆಗಳನ್ನು ಗಮನಿಸಿ, ಶೃಂಗೇರಿ ಶ್ರೀಶಾರಾದಾಪೀಠವು ತನ್ನ ಸಾಮಾಜಿಕ ಚಟುವಟಿಕೆಗಳಿಗೆ ಹೊಸ ಆಯಾಮವನ್ನು ನೀಡುತ್ತಿದೆ. ಮುಖ್ಯವಾಗಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ತನ್ನದೇ ಆದ ವಿಶಿಷ್ಟ ಕೊಡುಗೆಗಳನ್ನು ನೀಡುವುದರ ಮೂಲಕ ದೇಶಾದ್ಯಂತದ ಜನತೆಯ ಗಮನವನ್ನು ಸೆಳೆದಿದೆ.

ಹಿಂದಿನ ಪೀಠಾಧಿಪತಿಗಳಾದ ಜಗದ್ಗುರು ಶ್ರೀಮದಭಿನವವಿದ್ಯಾತೀರ್ಥಮಹಾಸ್ವಾಮಿಗಳವರ ಪೀಠಾರೋಹಣದ ರಜತಮಹೋತ್ಸವದ ಸಂದರ್ಭದಲ್ಲಿ ಶೃಂಗೇರಿಯಲ್ಲಿ ಪ್ರಾರಂಭಿಸಲಾದ ಶ್ರೀಶಾರದಾಧನ್ವಂತರಿ ಆಸ್ಪತ್ರೆಯು ಮಲೆನಾಡು ಪ್ರದೇಶದ ಜನತೆಯ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇಲ್ಲಿನ ಸುಸಜ್ಜಿತವಾದ ವಾರ್ಡ್‌ನಲ್ಲಿ ನೂರು ಹಾಸಿಗೆಗಳಿಗೂ ಹೆಚ್ಚಿನ ಸೌಕರ್ಯವಿದೆ. ಈ ಆಸ್ಪತ್ರೆಯು ಹೊರರೋಗಿಗಳ ವಿಭಾಗ, ಆಪರೇಶನ್ ಥಿಯೇಟರ್‌ಗಳು, ಬ್ಲಡ್‌ಬ್ಯಾಂಕ್, ಐಸಿಯು, ತಪಾಸಣಾ ಪ್ರಯೋಗಶಾಲೆ– ಇತ್ಯಾದಿಗಳನ್ನು ಹೊಂದಿದೆ.

ಪ್ರತ್ಯೇಕವಾದ ಆಯುರ್ವೇದ ಮತ್ತು ಹೋಮಿಯೋಪಥಿ ವಿಭಾಗಗಳೂ ಇಲ್ಲಿವೆ.

ಬೆಂಗಳೂರಿನ ಶಂಕರಮಠದ ಶತಮಾನೋತ್ಸವ ಸಂದರ್ಭದಲ್ಲಿ ಶ್ರೀಮಠದ ಸಮೀಪದಲ್ಲೇ ಆರಂಭಿಸಲಾದ ರಂಗ ದೊರೆ ಸ್ಮಾರಕ ಆಸ್ಪತ್ರೆಯು ಈಗಾಗಲೇ ಅತ್ಯುತ್ತಮ ಆಸ್ಪತ್ರೆ ಎಂಬ ಖ್ಯಾತಿಗೆ ಪಾತ್ರವಾಗಿದೆ. ಸುಮಾರು 200 ಹಾಸಿಗೆಗಳ ಈ ಆಸ್ಪತ್ರೆಯು ಜನರಲ್, ಸೆಮಿಸ್ಪೆಶಲ್, ಸ್ಪೆಶಲ್ ಮತ್ತು ಡಿಲಕ್ಸ್ ವಾರ್ಡ್‌ಗಳನ್ನು ಒಳಗೊಂಡಿದೆ. ಸಣ್ಣ ಮಕ್ಕಳ ವಿಶೇಷ ನಿಗಾ ಘಟಕವೂ ಇಲ್ಲಿದೆ. ಶಸ್ತ್ರಚಿಕಿತ್ಸೆಯ ನಾಲ್ಕು ವಿಶೇಷ ಘಟಕಗಳಲ್ಲಿ ಪ್ರತಿತಿಂಗಳೂ ಸುಮಾರು 280ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳು ನಡೆಯುತ್ತವೆ. ಅರವತ್ತು ಸುಸಜ್ಜಿತ ಡಯಾಲಿಸಿಸ್ ಯಂತ್ರೋಪಕರಣಗಳು ಇಲ್ಲಿವೆ. ಈ ಆಸ್ಪತ್ರೆಯಲ್ಲಿ ಪ್ರತಿ ತಿಂಗಳೂ ಸುಮಾರು 3600 ಡಯಾಲಿಸಿಸ್ ರೋಗಿಗಳು, 10000 ಹೊರ ರೋಗಿಗಳು ಮತ್ತು 800ಕ್ಕೂ ಹೆಚ್ಚು ಒಳರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಎಂಟು ಹಾಸಿಗೆಗಳನ್ನೊಳಗೊಂಡ ಐಸಿಯು ವಿಭಾಗವು ಅತ್ಯಾಧುನಿಕ ಉಪಕರಣಗಳನ್ನು ಹೊಂದಿದೆ. ತಜ್ಞ ವೈದ್ಯರ ತಂಡ ಈ ಆಸ್ಪತ್ರೆಯ ಜತೆಗಿದೆ. ಆರ್ಥಿಕವಾಗಿ ಸಂಕಷ್ಟದಲ್ಲಿರುವವರಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಶಾರದಾ ರೋಟರಿ ದಂತ ಮತ್ತು ಕಣ್ಣು ಸಂರಕ್ಷಣಾ ಕೇಂದ್ರವು ಶ್ರೀ ಶೃಂಗೇರಿ ಶಾರದಾಪೀಠ ಮತ್ತು ಬೆಂಗಳೂರು ರೋಟರಿ ಪಶ್ಚಿಮದ ಸಹಭಾಗಿತ್ವದಲ್ಲಿ ನಡೆಯುತ್ತಿದೆ. ಇದರ ಆಶ್ರಯದಲ್ಲಿ ದಂತ ಮತ್ತು ಕಣ್ಣು ಸಂರಕ್ಷಣಾ ಚಿಕಿತ್ಸೆ, ಪ್ರತಿವಾರ ಶಾಲೆ–ಕಾಲೇಜುಗಳಲ್ಲಿ ಆರೋಗ್ಯ ತಪಾಸಣಾ ಶಿಬಿರ, ಸೆಟಲೈಟ್ ಕೇಂದ್ರಗಳಲ್ಲಿ ಮಾಸಿಕ ಶಿಬಿರ–ಇವೆಲ್ಲ ನಡೆಯುತ್ತಿವೆ. ಪ್ರತಿ ತಿಂಗಳು ಸುಮಾರು ಮುನ್ನೂರು ಮಕ್ಕಳು ಇದರಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಶಾಲಾ ಮಕ್ಕಳಿಗೆ ವಿಶೇಷ ಚಿಕಿತ್ಸಾ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಚಿಕಿತ್ಸೆಗೆ ಬೇಕಾದ ಎಲ್ಲ ಉಪಕರಣಗಳಿಂದ ಸುಸಜ್ಜಿತವಾದ ಒಂದು ಸಂಚಾರೀ ಕಣ್ಣಾಸ್ಪತ್ರೆಯು ಪ್ರತಿವಾರ ನಗರ ಮತ್ತು ಗ್ರಾಮಾಂತರ ಪ್ರದೇಶದ ಜನರಿಗೆ ಸೇವೆಯನ್ನು ಒದಗಿಸುತ್ತಿದೆ. ಈ ಘಟಕಗಳು ಇದುವರೆಗೆ ಸುಮಾರು ಇಪ್ಪತ್ತು ಸಾವಿರಕ್ಕೂ ಹೆಚ್ಚು ಕಣ್ಣು ಪೊರೆಯ ಚಿಕಿತ್ಸೆಗಳನ್ನು ಉಚಿತವಾಗಿ ನಡೆಸಿವೆ.

ಶಂಕರ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರವು ಶೃಂಗೇರಿ ಶಾರದಾಪೀಠದ ದತ್ತಿವಿಶ್ವಸ್ಥ ನಿಧಿ ಮತ್ತು ಶಂಕರ ಕ್ಯಾನ್ಸರ್ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆಯು ಬೆಂಗಳೂರು ನಗರದ ಹೃದಯ ಭಾಗವಾದ ಶಂಕರಪುರದಲ್ಲಿನ ಶೃಂಗೇರಿ ಶಂಕರ ಮಠದ ಪ್ರಶಾಂತ ವಾತಾವರಣದಲ್ಲಿದೆ. ಇದಕ್ಕೆ ಬೇಕಾದ ಜಾಗವನ್ನು ಶ್ರೀಮಠದಿಂದ ಉಚಿತವಾಗಿ ನೀಡಲಾಗಿದೆ. ಉದಾರಹೃದಯಿಗಳಾದ ದಾನಿಗಳು, ಕರ್ನಾಟಕ ಮತ್ತು ಕೇಂದ್ರ ಸರಕಾರ ಹಾಗೂ ಅನೇಕ ಸಂಘ–ಸಂಸ್ಥೆಗಳ ಸಹಾಯದಿಂದ ಇಲ್ಲಿ ಕ್ಯಾನ್ಸರ್ ರೋಗಿಗಳಿಗೆ ಅತ್ಯುತ್ತಮ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ.

ಆಂಧ್ರಪ್ರದೇಶದ ಗುಂಟೂರಿನಲ್ಲಿ ಸುಶ್ರುತ ಮೊಬೈಲ್ ಆಸ್ಪತ್ರೆಯನ್ನು ಸ್ಥಾಪಿಸಲಾಗಿದ್ದು, ಅಲ್ಲಿನ ಮೊಬೈಲ್ ವಾಹನವು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸಂಚರಿಸಿ ಸಾವಿರಾರು ಮಂದಿಗೆ ಅವರ ಮನೆಯಲ್ಲೇ ಚಿಕಿತ್ಸೆ ಒದಗಿಸುತ್ತಿದೆ. ತಮಿಳುನಾಡಿನ ಸೇಲಂನಲ್ಲಿ 'ಶಾರದಾ ಧನ್ವಂತರಿ ಚಾರಿಟೇಬಲ್ ಡಿಸ್ಪೆನ್ಸರಿ' ಎಂಬ ವೈದ್ಯಕೀಯ ಸಂಸ್ಥೆಯನ್ನು ಆರಂಭಿಸಲಾಗಿದೆ. ಹೈದ್ರಾಬಾದ್‌ನಲ್ಲಿ ಸಂಚಾರೀ ಆರೋಗ್ಯ ತಪಾಸಣಾ ವಾಹನದ ಸೌಕರ್ಯವಿದೆ ಇವೆಲ್ಲವೂ ಆಯಾ ಪರಿಸರದ ಜನರಿಗೆ ಉತ್ತಮ ಸೇವೆಯನ್ನು ನೀಡುತ್ತಿವೆ.

ಇದಲ್ಲದೆ ಶಾರದಾ ಧನ್ವಂತರಿ ಆಸ್ಪತ್ರೆ ಶಾರದಾ ರೋಟರಿ ಹೃದ್ರೋಗ ತಪಾಸಣಾ ಕೇಂದ್ರ, ಶಾರದಾ ಔಷಧಾಲಯ, ಶ್ರೀಶಂಕರ ಆರೋಗ್ಯ ಸಂಶೋಧನಾ ಕೇಂದ್ರ, ಇನ್‌ಫರ್ಮೇಶನ್ ಆ್ಯಂಡ್ ರಿಸೋರ್ಸ್ ಸೆಂಟರ್ ಫಾರ್ ಪ್ಯೂಪಲ್ ಅಫೆಕ್ಟೆಡ್ ಬೈ ಆಸ್ಟಿವ್ ಮತ್ತು ಶಂಕರ ಟೆಸ್ಸೂ ಎಂಜಿನಿಯರಿಂಗ್ ರಿಸರ್ಚ್ ಸೆಂಟರ್ ಇವೆಲ್ಲ ಬೆಂಗಳೂರಿನಲ್ಲಿರುವ ಮತ್ತಷ್ಟು ಆರೋಗ್ಯ ಕೇಂದ್ರಗಳು. ಆಂಧ್ರಪ್ರದೇಶದ ಗುಂಟೂರಿನಲ್ಲಿ ನೂರಿಪ್ಪತ್ತು ಹಾಸಿಗೆಗಳ ಒಂದು ಆಸ್ಪತ್ರೆ ಮತ್ತು ಚೆನ್ನೈ ನಗರದ ತಾಂಬ್ರಂನಲ್ಲಿ ಒಂದು ಕ್ಯಾನ್ಸರ್ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿವೆ.

**ಶೈಕ್ಷಣಿಕ ಚಟುವಟಿಕೆಗಳು**

ಶ್ರೀ ಶಾರದಾಪೀಠವು ಕಳೆದ ಅನೇಕ ವರ್ಷಗಳಿಂದ ಶಿಕ್ಷಣ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಾ ಬಂದಿದೆ. ಶೃಂಗೇರಿಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥಪ್ರೌಢಶಾಲೆಯು ಕಳೆದ ಕೆಲವು ವರ್ಷಗಳಿಂದ ಅತ್ಯುತ್ತಮ ಶಿಕ್ಷಣವನ್ನು ನೀಡುತ್ತಿದೆ. ಕಂಪ್ಯೂಟರ್ ಶಿಕ್ಷಣ ನೀಡುವ ಉದ್ದೇಶದಿಂದ ಶ್ರೀ ಮಠವು ಶೃಂಗೇರಿ ಪಟ್ಟಣದ ಹೃದಯ ಭಾಗದಲ್ಲಿ ವಿದ್ಯಾನಿಧಿ ಜ್ಞಾನಕೇಂದ್ರವನ್ನು ನಿರ್ವಹಿಸುತ್ತಿದೆ.

1988ರಲ್ಲಿ ಜಗದ್ಗುರು ಶ್ರೀಮದಭಿನವ ವಿದ್ಯಾತೀರ್ಥಮಹಾಸ್ವಾಮಿಗಳವರು ಬೆಂಗಳೂರಿನಲ್ಲಿ ಸ್ಥಾಪಿಸಿದ ಜ್ಞಾನೋದಯ ಶಾಲೆಯು ಅತ್ಯಂತ ಜನಪ್ರಿಯವಾದುದು. ಈ ಶಾಲೆಯು ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಪ್ರಾರಂಭಿಸಿ ಹತನೆಯ ತರಗತಿಯವರೆಗೆ ಸಿಬಿಎಸ್‌ಇ ಪಠ್ಯಕ್ರಮವನ್ನು ಅನುಸರಿಸುತ್ತಿರುವುದಲ್ಲದೆ, ಕರ್ನಾಟಕ ಸರಕಾರದ ಪಠ್ಯಕ್ರಮದಲ್ಲಿ ಪದವಿಪೂರ್ವ ಶಿಕ್ಷಣವನ್ನು ನೀಡುತ್ತಿದೆ. ಮೌಲ್ಯಾಧಾರಿತ ಶಿಕ್ಷಣಕ್ಕೆ ಪ್ರಸಿದ್ಧವಾದ ಈ ಶಾಲೆಯ ಕನ್ನಡ ವಿಜ್ಞಾನ ಪ್ರಯೋಗ ಶಾಲೆ, ಆರ್ಯಭಟ ಗಣಿತ ಪ್ರಯೋಗ ಶಾಲೆ, ಪಾಣಿನಿ ಭಾಷಾ ಪ್ರಯೋಗ ಶಾಲೆ, ಜಗದ್ಗುರು ಶ್ರೀ ಸಚ್ಚಿದಾನಂದಶಿವಾಭಿನವನೃಸಿಂಹಭಾರತೀ ಮಾಹಿತಿ ಕೇಂದ್ರ, ರಾಮನ್ ವಿಜ್ಞಾನಕೇಂದ್ರ ಮೊದಲಾದುವುಗಳನ್ನು ಹೊಂದಿರುವುದಿಲ್ಲದೆ. ಸುಸಜ್ಜಿತ ಸಭಾಭವನ ಮತ್ತು ಅತ್ಯುತ್ತಮ ಗ್ರಂಥಾಲಯವನ್ನೊಳಗೊಂಡಿದೆ. ಇಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗುತ್ತಿದೆ. ಇದೇ ಮಾದರಿಯಲ್ಲಿ ಮೈಸೂರಿನಲ್ಲಿ ಜ್ಞಾನೋದಯ ಪದವಿಪೂರ್ವಕಾಲೇಜು ಮತ್ತು ದೊಂಬಿಲಿಯಲ್ಲಿ ಜ್ಞಾನೋದಯ ವಿದ್ಯಾಲಯವನ್ನು ನಡೆಸಲಾಗುತ್ತಿದೆ.

(ಮುಂದುವರಿಯುವುದು)

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ

ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ }

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4–30ರಿಂದ

**ತಾ.02-06-2018 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.31-05-2018 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**


**ತಾ.19-05-2018 ಮತ್ತು ತಾ.03-06-2018 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

With Best Complimemts From
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯಶಸ್ವೀ ಎಂಟರ್‌ಪ್ರೈಸೆಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ–ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams




SAMPATH KUMAR Mobile : 9741508881
TRISHULINI TOURIST
The Tourist People
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

## ಶುಭವಿವಾಹ

ಕುಂಜಾರುಗಿರಿ ಶ್ರೀಹರಿನಾರಾಯಣರಾವ್ ಹಾಗೂ ಶ್ರೀಮತಿ ಹೇಮಲತಾರವರ ಪುತ್ರಿ **ಅಶ್ವಿನಿ** ಮತ್ತು ಕಬ್ಬಿನಾಲೆ ಶ್ರೀಮತಿ ಆರುಂಧತಿ ಹಾಗೂ ಕೆ.ಪರಮೇಶ್ವರ ಹೆಬ್ಬಾರ್‌ರ ಪುತ್ರ **ರವಿಕಿರಣ್** ಇವರ ವಿವಾಹವು ತಾ.19.02.2018ರಂದು ಉಡುಪಿ ಶ್ರೀಶಾರದಾಮಂಟಪದಲ್ಲಿ ನೆರವೇರಿತು.

**** ****

ಮಿಯ್ಯಾರು ಶ್ರೀ ಯು.ಜಿ. ಸೋಮಶೇಖರ ರಾವ್ ಹಾಗೂ ಶ್ರೀಮತಿ ಯಶೋದರವರ ಪುತ್ರಿ **ಶ್ರೀನಿಧಿ** ಮತ್ತು ಎರ್ಮಾಳು ಶ್ರೀ ವೈ. ಕುಮಾರಸ್ವಾಮಿ ಹಾಗೂ ಶ್ರೀಮತಿ ಭಾಗೀರಥಿ ಇವರ ಪುತ್ರ **ಪ್ರಶಾಂತ** ಇವರ ವಿವಾಹವು 29.04.2018ರಂದು ಪುತ್ತೂರು ಮಹಾಲಿಂಗೇಶ್ವರ ಸಭಾಭವನದಲ್ಲಿ ನೆರವೇರಿತು.

**** ****

ಉಡುಪಿ ಇಂದ್ರಾಳಿ ಶ್ರೀ ವೈ. ಮುರಲೀಕೃಷ್ಣರಾವ್ ಹಾಗೂ ಜಯಲಕ್ಷ್ಮಿರವರ ಪುತ್ರ **ಸ್ವರೂಪ್** ಮತ್ತು ಶ್ರೀ ಸುದರ್ಶನ್ ರಾವ್ ಬಿ.ಕೆ ಹಾಗೂ ಪದ್ಮಜಾರವರ ಪುತ್ರಿ **ಅವನಿ**ರವರ ವಿವಾಹವು ತಾ.30.04.2018 ರಂದು ಮಣಿಪಾಲ ಆರ್.ಎಸ್.ಬಿ. ಸಭಾಭವನದಲ್ಲಿ ನೆರವೇರಿತು.

**** ****

ನೆಲ್ಲಿಕುಂಜೆ ಕೀರ್ತಿಶೇಷ ಸತೀಶ್ಚಂದ್ರ ರಾವ್ ಹಾಗೂ ಉಷಾ ದಂಪತಿಗಳ ಪುತ್ರ **ಕೌಸ್ತುಭ** ಮತ್ತು ಬೇವಿಂಜೆ ಸೂರ್ಯನಾರಾಯಣ ಹಾಗೂ ಶ್ರೀಮತಿ ಸುಧಾಮಣಿ ದಂಪತಿಗಳ ಪುತ್ರಿ **ರಮ್ಯ** ಇವರ ವಿವಾಹವು ಸುಳ್ಯ ಉದಯಮಂಗಲ ಕಳಭಂ ಕಲ್ಯಾಣ ಮಂಟಪದಲ್ಲಿ ತಾ.02.05.2018ರಂದು ನೆರವೇರಿತು.

**** ****

ಕಾರ್ಕಳ ಅತ್ತೂರು ಶ್ರೀಮತಿ ನಯನ ಶ್ರೀನಿವಾಸರಾಯರ ಪುತ್ರ **ಸಂದೇಶ್** ಹಾಗೂ ಮುಂಬಯಿ ಶ್ರೀಮತಿ ಮತ್ತು ಜವಹಾರ್ ಶರ್ಮರವರ ಪುತ್ರಿ **ಪ್ರೀತಿ** ಇವರ ವಿವಾಹವು 07.05.2018ರಂದು ಕಾರ್ಕಳ ಶ್ರೀ ರಾಧಾಕೃಷ್ಣ ಸಭಾಭವನದಲ್ಲಿ ನೆರವೇರಿತು.

## ಸೀಮಂತೋನ್ನಯನ

ಉಡುಪಿ ಇಂದ್ರಾಳಿ ಶ್ರೀ ವೈ. ಮುರಲೀಕೃಷ್ಣರಾವ್ ಹಾಗೂ ಜಯಲಕ್ಷ್ಮಿಯವರ ಸೊಸೆ ಹಾಗೂ ಶ್ರೀ ಅನೂಪ್‌ರವರ ಪತ್ನಿ ಹರ್ಷಿತಾಳಿಗೆ ತಾ.27.04.2018ರಂದು ಉಡುಪಿಯ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಜ್ಞಾನಮಂದಿರದಲ್ಲಿ ಸೀಮಂತೋನ್ನಯನ ನೆರವೇರಿತು.

## ವಿಳಾಸ ಬದಲಾವಣೆ

**ಶ್ರೀ.ಜಿ.ಕೆ.ರಾವ್**
170/l, 16ನೇ ಮುಖ್ಯ ರಸ್ತೆ,
1ನೇ ಅಡ್ಡರಸ್ತೆ, A-004, "ಕೃಷ್ಣ ಪ್ರಕಾಶ",
"ಈಶಾವಾಸ್ಯಂ", ಬಿ.ಟಿ.ಎಂ ಲೇ ಔಟ್,
ಒಂದನೇ ಹಂತ ಬೆಂಗಳೂರು-560068.

**** ****

**SRI SACHIDANANDA SHARMA P.**
"Neha Nivas",
Near Vanadurga Temple,
Anegundi Road,
Bijai, Mangalore - 575 004. Mobile : 7829637292

**** ****

**JAGADISH RAO**
101, Shanthananda Apartments
Near Veerabhadra Temple,
Kinnimulki, Udupi - 576 101.

## ಬ್ರಹ್ಮೋಪದೇಶ

**ಚಿ| ಯಶಸ್**

ಶ್ರೀಮತಿ ಸೌಮ್ಯ ಹಾಗೂ ಮುಂಡ್ಕೂರು ಶ್ರೀ ನಾಗೇಶ್ ರಾವ್‌ರವರ ಪುತ್ರ **ಯಶಸ್**ನ ಉಪನಯನವು ತಾ.18.04.2018ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

**** ****

**ಚಿ| ಶ್ರೇಯಸ್**

ಮಂಗಳೂರಿನ ಶ್ರೀಮತಿ ಮತ್ತು ಶ್ರೀ ಶ್ರೀಕಾಂತ ರಾಯರ ಪುತ್ರ **ಶ್ರೇಯಸ್**ನ ಉಪನಯನವು ತಾ.22.04.2018ರಂದು ಮಂಗಳೂರಿನ ಸುಬ್ರಹ್ಮಣ್ಯ ಸಭಾಭವನದಲ್ಲಿ ನೆರವೇರಿತು.

**** ****

**ಚಿ| ಅರುಣ್ ಕುಮಾರ್**

ಕಾಪು ಶ್ರೀ ಗಿರೀಶ್ಚಂದ್ರರಾವ್ ಹಾಗೂ ಶ್ರೀಮತಿ ಅಕ್ಷತಾ ದಂಪತಿಗಳ ಪುತ್ರ **ಅರುಣ್ ಕುಮಾರ್**ನ ಉಪನಯನವು ತಾ.22.04.2018 ರಂದು ಕಾಪು ಶ್ರೀ ಲಕ್ಷ್ಮೀ ಜನಾರ್ಧನ ದೇವಸ್ಥಾನದ ಸಭಾಭವನದಲ್ಲಿ ನೆರವೇರಿತು.

**** ****

**ಚಿ| ವಿಶ್ರುತ್**

ಹೊಯಿಗೆಗುಡ್ಡೆ ಶ್ರೀಮತಿ ಸ್ವಾತಿ ಹಾಗೂ ಶ್ರೀ ಅಜಿತ್ ಶರ್ಮಾ ದಂಪತಿಗಳ ಪುತ್ರ **ವಿಶ್ರುತ್**ನ ಉಪನಯನವು ತಾ.02.05.2018 ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಸಭಾಭವನದಲ್ಲಿ ನೆರವೇರಿತು.

**** ****

**ಚಿ| ಪ್ರಜ್ವಲ್**

ಉಡುಪಿ ಚಿಟ್ಪಾಡಿ ಶ್ರೀಮತಿ ಕವಿತಾ ಹಾಗೂ ಶ್ರೀ ಭರತೇಶ್ ರಾವ್‌ರವರ ಪುತ್ರ **ಪ್ರಜ್ವಲ್**ನ ಉಪನಯನವು ತಾ.07.05.2018ರಂದು ಉಡುಪಿ ರಥಬೀದಿಯ ಶ್ರೀ ರಾಘವೇಂದ್ರ ಮಠದಲ್ಲಿ ನೆರವೇರಿತು.

**** ****

**ಚಿ| ಸುಪ್ರೀತ್**

ಮುಂಬಯಿಯ ಶ್ರೀಮತಿ ಶ್ವೇತಾ ಹಾಗೂ ಶ್ರೀ ಅನಂತೇಶ್ ಶ್ಯಾನುಭಾಗ್‌ರವರ ಪುತ್ರ **ಸುಪ್ರೀತ್**ನ ಉಪನಯನವು ತಾ.07.05.2018 ರಂದು ಉಡುಪಿಯ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಜ್ಞಾನಮಂದಿರದಲ್ಲಿ ನೆರವೇರಿತು.

**** ****

**ಚಿ| ಸನತ್**

ಕಾರವಾರದ ಶ್ರೀಮತಿ ಸೌಮ್ಯ ಮತ್ತು ಶ್ರೀ ನಾರಾಯಣ ಲೋಕೇಶ್ವರ ದಂಪತಿಗಳ ಪುತ್ರ **ಸನತ್**ನ ಉಪನಯನವು ತಾ.10.05.2018ರಂದು ಉಡುಪಿಯ ಗೋವಿಂದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

**** ****

**ಚಿ| ಸ್ಕಂದ**

ಉಡುಪಿ ಚಿಟ್ಪಾಡಿ ಶ್ರೀಮತಿ ಜ್ಯೋತಿ ಹಾಗೂ ಶ್ರೀ ಎಂ.ಸಂತೋಷ್ ರಾವ್‌ರವರ ಪುತ್ರ **ಸ್ಕಂದನ** ಉಪನಯನವು ತಾ.10.05.2018 ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## ಅಭಿನಂದನೆಗಳು



**ಶ್ರವಣ್ ಕುಮಾರ್**

ಕದ್ರಿ ದಿ| ಕೆ.ಶೇಷಾದ್ರಿ ರಾವ್ ಮತ್ತು ಶ್ರೀಮತಿ ಪದ್ಮ ಎಸ್.ರಾವ್ (ರಾಜಮ್ಮ) ಇವರ ಮೊಮ್ಮಗ, ಶ್ರೀಮತಿ ಯಶೋಧ ಮತ್ತು ಶ್ರೀ ರಾಜ್ ಕುಮಾರ್ ಎಸ್.ರಾವ್ ಇವರ ಪುತ್ರ, ವಿವೇಕ ಪ.ಪೂ.ಕಾಲೇಜು ಕೋಟ ಇದರ ವಿದ್ಯಾರ್ಥಿ ಶ್ರವಣ್ ಕುಮಾರ್ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇ.97.5%. ಒಟ್ಟು ಅಂಕ (585/600)ಗಳಿಸಿ ಉತ್ತೀರ್ಣನಾಗಿದ್ದಾನೆ. ಇವನಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.



**ಅದಿತಿ ಎ.ರಾವ್**

ಶ್ರೀ ಎಮ್.ಸದಾನಂದ ರಾವ್, ಚಿಟ್ಪಾಡಿ ಹಾಗೂ ಶ್ರೀಮತಿ ಮತ್ತು ಶ್ರೀ ಕೆ.ಎಸ್.ಪ್ರಭಾಕರ ರಾವ್‌ರವರ ಮೊಮ್ಮಗಳು ಹಾಗೂ ಪ್ರಸ್ತುತ ಮೈಸೂರಿನಲ್ಲಿರುವ ಶ್ರೀಮತಿ ಆಶಾ ಮತ್ತು ಶ್ರೀ ಎಂ.ಅಶೋಕ್ ರಾವ್ ಚಿಟ್ಪಾಡಿ ಇವರ ಪುತ್ರಿ. ಕು| ಅದಿತಿ ಎ.ರಾವ್ ಈ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 624/625 ಅಂಕ ಗಳಿಸಿ ಕರ್ನಾಟಕ ರಾಜ್ಯಕ್ಕೆ ದ್ವಿತೀಯ ಸ್ಥಾನಿಯಾಗಿ ಮೂಡಿಬಂದಿರುತ್ತಾಳೆ. ಇವಳು ಸದ್ವಿದ್ಯಾ ಪ್ರೌಢಶಾಲೆ, ಮೈಸೂರು ಇಲ್ಲಿಯ ವಿದ್ಯಾರ್ಥಿನಿ. ಇವಳಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

## ಗೃಹಪ್ರವೇಶ

ಮೂಡಬಿದ್ರೆಯ ಶ್ರೀ ಜನಾರ್ಧನರಾವ್ ಹಾಗೂ ಪ್ರತಿಮಾ ದಂಪತಿಗಳು ಮೂಡಬಿದ್ರೆ ಅಲಂಗಾರಿನಲ್ಲಿ ನೂತನವಾಗಿ ನಿರ್ಮಿಸಿರುವ "ಪಾರ್ವತಿ ನಿಲಯ"ದ ಗೃಹಪ್ರವೇಶವನ್ನು ತಾ.30.04.2018ರಂದು ನೆರವೇರಿಸಿದರು

## ವಾರ್ಷಿಕೋತ್ಸವ

ಕೋಟೆಕಾರು ಶ್ರೀ ಶೃಂಗೇರಿ ಮಠದ ಶ್ರೀ ಶಾರದಾ ಸಂಗೀತ ಮಹಾವಿದ್ಯಾಲಯದ ವಾರ್ಷಿಕೋತ್ಸವವು ತಾ.21-04-2018ರಂದು ನೆರವೇರಿತು. ಸಭೆಯ ಅಧ್ಯಕ್ಷತೆಯನ್ನು ಡಾ.ಕೆ. ಸುರೇಂದ್ರ ರಾವ್ ವಹಿಸಿದ್ದರು. ಶ್ರೀ ಪ್ರದೀಪ್ ಕುಮಾರ್ ಕಲ್ಕೂರ್ ಹಾಗೂ ವಿದ್ವಾನ್ ಬಾಬು ರೈ ಅತಿಥಿಗಳಾಗಿ ಆಗಮಿಸಿದ್ದರು. ಪ್ರಾಂಶುಪಾಲ ಶ್ರೀ ಬೊಳ್ಳಾವ ಸತ್ಯಶಂಕರ ರಾವ್ ಉಪಸ್ಥಿತರಿದ್ದರು.

## ನಿಧನ



**ಶ್ರೀ ಎ.ಸಂತೋಷರಾವ್**

ಮೂಡುಅಲೆವೂರು ಲಕ್ಷ್ಮೀಕೃಪಾ ನಿವಾಸಿ ಶ್ರೀ ಎ.ಸಂತೋಷರಾವ್‌ರವರು ತಾ.23.4.2018 ರಂದು ನಿಧನ ಹೊಂದಿದರು. ಅವರು ಪತ್ನಿ ರಾಜೀವಿ, ಪುತ್ರ ಡಾ.ಸಂದೀಪ್, ಪುತ್ರಿ ಡಾ.ಸಂಜಾತ ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

**** ****



**ಶ್ರೀಮತಿ ವನಜಾಕ್ಷಿರಾವ್**

ನಮ್ಮ ಸಂಘದ ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಕೃಷ್ಣಾನಂದ ರಾವ್‌ರವರ ತಾಯಿ ಉಂಡಾರು ನಿವಾಸಿ ಶ್ರೀಮತಿ ವನಜಾಕ್ಷಿರಾವ್‌ರವರು ತಾ.29.04.2018ರಂದು ನಿಧನ ಹೊಂದಿದರು.

**** ****



**ಶಾಂತಾ ವಿ. ರಾವ್**

ಕಟಪಾಡಿ ಮೂಡಬೆಟ್ಟು ವೆಂಕಟರಮಣ ರಾಯರ ಧರ್ಮಪತ್ನಿ ಶ್ರೀಮತಿ ಶಾಂತಾ ವಿ.ರಾವ್‌ರವರು ತಾ.12.04.2018ರಂದು ನಿಧನಹೊಂದಿದರು.

**** ****



**ಕುಂಜಾರು ನಿರಂಜನ ರಾಯರು**

ಉಡುಪಿಯ ಅಂಬಾಪಾಡಿಯಲ್ಲಿ ನೆಲೆಸಿದ್ದ ಪುತ್ತೂರು (ದ.ಕ.) ಕುಂಜಾರು ನಿರಂಜನರಾಯರು ಏಪ್ರಿಲ್ 12ರಂದು ತಮ್ಮ 66ನೇ ವಯಸ್ಸಿನಲ್ಲಿ ಸ್ವಗೃಹದಲ್ಲಿ ನಿಧನರಾದರು.

ಅವರು ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿಯಾಗಿ ಬ್ಯಾಂಕಿನ ಪ್ರಧಾನ ಕಛೇರಿ, ಮಲ್ಪೆ, ಕುಂದಗೋಳ ಶಾಖೆಗಳಲ್ಲಿ ಸೇವೆ ಸಲ್ಲಿಸಿ ಕೊನೆಗೆ ಮತ್ತೆ ಪ್ರಧಾನ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಾ ಸ್ವಯಂ ನಿವೃತ್ತಿ ಪಡೆದಿದ್ದರು.

ಮೃತರು ಪತ್ನಿ, ಓರ್ವ ಪುತ್ರ, ಸೊಸೆ, ಒಬ್ಬ ಸೋದರ, ಮೂವರು ಸೋದರಿಯರು ಹಾಗೂ ಬಂಧು ಬಾಂಧವರನ್ನು ಅಗಲಿದ್ದಾರೆ.

### ಚುಟುಕುಗಳು

**ದೊಂಬರಾಟ**


ಚುನಾವಣೆ ಎಂಬ ಆಟ...!
ಮಾತಿನ ಮಲ್ಲರ ಅರಚಾಟ...!
ತೆರೆಮರೆಯ ಕೆಸರೆರೆಚಾಟ...!
ಜನ ಸಾಮಾನ್ಯರ ಪರದಾಟ...!
ಇದುವೇ ಸ್ವಾರ್ಥ, ಸ್ವಪ್ರತಿಷ್ಠೆಗಳಿಗಾಗಿ...!
ರಾಜಕಾರಣಿಗಳ ದೊಂಬರಾಟ...!

**ಚುನಾವಣೆ**

ಬಂತು ಬಂತು ಚುನಾವಣೆ...!
ತಂತು ತಂತು ಆಮಿಷ ಆಕರ್ಷಣೆ...!
ಪ್ರಜೆಗಳೇ ಪ್ರಭುಗಳು ಎಂಬ ಘೋಷಣೆ...!
ಮರುಳಾಗದಿರಿ ಮತದಾರರೇ...!
ಇದು ಬರೀ ಶೋಷಣೆ...!

-ಮಲ್ಲಿಕ್, ಉಳಿಯಾರು

## ಕೃತಜ್ಞತೆಗಳು




**ಚಿ| ಸ್ವರೂಪ್ ಮತ್ತು ಚಿ| ಸೌ| ಅವನಿ**

*ತಾ.30-04-2018ರಂದು ಉಡುಪಿ ಮಣಿಪಾಲದ ಆರ್‌ಎಸ್‌ಬಿ ಸಭಾಭವನದಲ್ಲಿ ನಡೆದ ಚಿ| ಸ್ವರೂಪ್ ಮತ್ತು ಚಿ| ಸೌ| ಅವನಿ ಇವರ ವಿವಾಹ ಸಮಾರಂಭಕ್ಕೂ ಹಾಗೂ ತಾ.01-05-2018ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನಡೆದ ಔತಣಕೂಟಕ್ಕೂ ಆಗಮಿಸಿ, ನೂತನ ವಧೂವರರನ್ನು ಹರಸಿದ ಹಾಗೂ ಸಮಾರಂಭವು ಯಶಸ್ವಿಯಾಗಲು ಸಹಕರಿಸಿದ ಎಲ್ಲಾ ಬಂಧು ಬಾಂಧವರಿಗೂ, ಹಿತೈಷಿಗಳಿಗೂ, ಸ್ನೇಹಿತರಿಗೂ ತುಂಬು ಮನದ ಕೃತಜ್ಞತೆಗಳು.*

**ಶ್ರೀಮತಿ ಜಯಲಕ್ಷ್ಮಿ ಮತ್ತು ಶ್ರೀ ಮುರಲಿಕೃಷ್ಣ ರಾವ್, ಇಂದ್ರಾಳಿ, ಉಡುಪಿ**
**ಶ್ರೀಮತಿ ಹರ್ಷಿತಾ ಮತ್ತು ಶ್ರೀ ಅನೂಪ್ ರಾವ್, ಇಂದ್ರಾಳಿ, ಉಡುಪಿ**
**ಶ್ರೀಮತಿ ಪದ್ಮಜಾ ಮತ್ತು ಶ್ರೀ ಸುದರ್ಶನ್ ರಾವ್ ಬಿ.ಕೆ., ಗೋಕಾಕ**
**ರಶ್ಮಿ ಎಸ್.ರಾವ್, ಗೋಕಾಕ**

## ಅಭಿನಂದನೆಗಳು



**ಕು| ಅದಿತಿ ಎ.ರಾವ್**
(D/o ಶ್ರೀಮತಿ ಆಶಾ ಮತ್ತು ಶ್ರೀ ಎಂ. ಆಶೋಕ್ ರಾವ್, ಚಿಟ್ಪಾಡಿ)

ಈ ವರ್ಷದ ಕರ್ನಾಟಕ ರಾಜ್ಯಮಟ್ಟದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 624/625 ಅಂಕ ಗಳಿಸಿ ಕರ್ನಾಟಕ ರಾಜ್ಯಕ್ಕೆ ದ್ವಿತೀಯ ಸ್ಥಾನಿಯಾಗಿ ಮೂಡಿಬಂದಿರುವ ನಿನಗಿದೋ ನಮ್ಮ ಅಭಿನಂದನೆಗಳು

ಶ್ರೀ ಎಮ್.ಸದಾನಂದ ರಾವ್, ಚಿಟ್ಪಾಡಿ
ಶ್ರೀಮತಿ ಸುಶೀಲ ಮತ್ತು ಶ್ರೀ ಕೆ.ಎಸ್.ಪ್ರಭಾಕರ ರಾವ್, ಮೈಸೂರು
ಶ್ರೀಮತಿ ಆಶಾ ಮತ್ತು ಶ್ರೀ ಯು.ಅರವಿಂದ ಕುಮಾರ್, ಸಂತೋಷನಗರ, ಉಡುಪಿ
ಶ್ರೀಮತಿ ಅನಸೂಯ ಮತ್ತು ಶ್ರೀ ಪದ್ಮಾನಂದ ರಾವ್, ಉಡುಪಿ
ಶ್ರೀಮತಿ ಮಮತ ಮತ್ತು ಶ್ರೀ ಹರೀಶ್ ರಾವ್, ಧರ್ಮಸ್ಥಳ
ಶ್ರೀಮತಿ ಜ್ಯೋತಿ ಮತ್ತು ಶ್ರೀ ಸಂತೋಷ್ ರಾವ್, ಚಿಟ್ಪಾಡಿ
ಶ್ರೀಮತಿ ಸಂಧ್ಯಾ ಮತ್ತು ಶ್ರೀ ವಿದ್ಯಾಧರ ರಾವ್, ಅದಮಾರು

## ಅಗಲಿದ ಹಿರಿಯ ಚೇತನ ಕೆ.ಸೂರ್ಯನಾರಾಯಣ ರಾವ್



ವಿದ್ಯಾರ್ಥಿಗಳ ನೆಚ್ಚಿನ ಪ್ರಾಧ್ಯಾಪಕ, ಪ್ರಖ್ಯಾತ "ಕಿಣಿ ಆ್ಯಂಡ್ ರಾವ್" ಪುಸ್ತಕದ ಲೇಖಕ , ಶ್ರೀ ಕಾರ್ಕಳ ಸೂರ್ಯನಾರಾಯಣ ರಾವ್ ಇದೇ ಎಪ್ರಿಲ್ ಮೂರರಂದು ನಿಧನ ಹೊಂದಿದರು. ನೇರವಾಗಿ ಅಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಹಾಗೂ ಪರೋಕ್ಷವಾಗಿ ತನ್ನ ಪಠ್ಯ ಪುಸ್ತಕದ ಮೂಲಕ ಕರ್ನಾಟಕದ ಲಕ್ಷಾಂತರ ವಿದ್ಯಾರ್ಥಿಗಳ ಜ್ಞಾನದ ದೀಪ ಹೊತ್ತಿಸಿದ ದಿವ್ಯ ಚೇತನ ಅಂದು ಅಸ್ತಂಗತವಾಯಿತು. ತಾನೂ ಬೆಳಗಿ, ತನ್ನ ಮೂರೂ ಮಕ್ಕಳಿಗೂ ದಾರಿ ತೋರಿಸಿ, ಲಕ್ಷಾಂತರ ವಿದ್ಯಾರ್ಥಿಗಳ ಅಭಿಮಾನವನ್ನು ಗಳಿಸಿದ ಶ್ರೀ ಸೂರ್ಯನಾರಾಯಣ ರಾಯರು ಜನಿಸಿದ್ದು 18-05-1930ರಲ್ಲಿ. ಇವರ ತಂದೆ ಕಾರ್ಕಳ ಪದ್ಮನಾಭಯ್ಯ ಹಾಗೂ ತಾಯಿ ಲಕ್ಷ್ಮಮ್ಮ. ಕಾರ್ಕಳದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ, ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಶಿಕ್ಷಣದ ಬಳಿಕ ಬಾರ್ಕೂರು ಹಾಗೂ ಮುಲ್ಕಿಯ ಹೈಸ್ಕೂಲುಗಳಲ್ಲಿ ಶಿಕ್ಷಕನಾಗಿ ವೃತ್ತಿಜೀವನ ಆರಂಭಿಸಿದರು. ಸ್ವಲ್ಪ ಸಮಯದ ಬಳಿಕ ಧಾರವಾಡದಲ್ಲಿ ರಸಾಯನ ಶಾಸ್ತ್ರದಲ್ಲಿ ಎಂ.ಎಸ್ಸಿ ಪದವಿ ಸಂಪೂರ್ಣಗೊಳಿಸಿ ಕಾರ್ಕಳದ ಭುವನೇಂದ್ರ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಅಧ್ಯಾಪಕರಾಗಿ ಸೇರಿಕೊಂಡರು. ಅಲ್ಲಿಂದ ನಿವೃತ್ತಿಯ ತನಕ ಇದೇ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಾ ವಿವಿಧ ಹುದ್ದೆಗಳನ್ನು ನಿರ್ವಹಿಸುತ್ತಾ ವಿದ್ಯಾರ್ಥಿಗಳ ಹಾಗೂ ಕಾಲೇಜಿನ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿದರು. ತನ್ನ ಸಹೋದ್ಯೋಗಿ ಪ್ರೊ| ದಾಮೋದರ ಕಿಣಿಯವರೊಂದಿಗೆ ಜೊತೆಯಾಗಿ ಪದವಿಪೂರ್ವ ಹಾಗೂ ಪದವಿ ವಿದ್ಯಾರ್ಥಿಗಳಿಗಾಗಿ ಅವರು ಬರೆದಿದ್ದ ರಸಾಯನ ಶಾಸ್ತ್ರದ ಪುಸ್ತಕ "ಕಿಣಿ ಆ್ಯಂಡ್ ರಾವ್" ತನ್ನ ಸರಳ ವಿವರಣೆಗಳಿಗಾಗಿ ಅತ್ಯಂತ ಪ್ರಸಿದ್ಧಿ ಪಡೆದಿತ್ತು. ನಿವೃತ್ತಿಯ ನಂತರ ಶ್ರೀಯುತರು ಕನ್ನಡ ಸಾಹಿತ್ಯ ಸಂಘದಲ್ಲಿ ಸಕ್ರಿಯರಾಗಿದ್ದರು. ಶ್ರೀ ಭುವನೇಂದ್ರ ಕಾಲೇಜಿನ ಟ್ರಸ್ಟಿಯಾಗಿ 16 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ತಮ್ಮ ರಸಾಯನ ಶಾಸ್ತ್ರದ ಪುಸ್ತಕಕ್ಕೆ 1994ನೇ ಇಸವಿಯ ತನಕ ತನ್ನ ಕಾಣಿಕೆಯನ್ನು ನೀಡಿದ್ದಾರೆ. ನಮ್ಮ ಸಮಾಜದ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ಭಾಗವಹಿಸುತ್ತಿದ್ದರು. ನಮ್ಮ ಶ್ರೀ ಶಾರದಾ ಮಂಟಪದಲ್ಲಿರುವ ಪದ್ಮನಾಭಯ್ಯ ಹಾಲ್ ಇವರ ತಂದೆ ಶ್ರೀ ಕೆ. ಪದ್ಮನಾಭಯ್ಯರವರ ಸ್ಮರಣಾರ್ಥ ಅವರ ಕುಟುಂಬದವರು ನೀಡಿದ ದೇಣಿಗೆಯಲ್ಲಿ ಕಟ್ಟಿಸಿದ್ದುದಾಗಿದೆ. ಅವರ ಪತ್ನಿ ಶ್ರೀಮತಿ ಇಂದಿರಾ ತೋಕೂರು ಕೃಷ್ಣಯ್ಯ ಹಾಗೂ ಸುಂದರಿಯವರ ಪುತ್ರಿ (ವಿವಾಹದ ವರ್ಷ 1960). 88 ವರ್ಷಗಳ ಸಾರ್ಥಕ ಬದುಕಿನಲ್ಲಿ ಓರ್ವ ಪುತ್ರ ಹಾಗೂ ಈರ್ವರು ಪುತ್ರಿಯರನ್ನು ಬೆಳೆಸಿ ಓದಿಸಿ ಸಮಾಜಕ್ಕೆ ಕಾಣಿಕೆಯಾಗಿ ನೀಡಿದ್ದಾರೆ. ಪುತ್ರ ಡಾ| ಶರತ್ ರಾವ್ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಖ್ಯಾತ ಎಲುಬು ಮೂಳೆ ತಜ್ಞರಾಗಿದ್ದು ಮೆಡಿಕಲ್ ಕಾಲೇಜಿನ ಅಸೋಸಿಯೇಟ್ ಡೀನ್ ಆಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಪುತ್ರಿ ಡಾ| ಶರಣ್ಯಾ ಭಟ್ ದುಬೈಯಲ್ಲಿ ರೇಡಿಯಾಲಜಿಸ್ಟ್ ಆಗಿ ಹಾಗೂ ಇನ್ನೋರ್ವ ಪುತ್ರಿ ಡಾ| ಸಂಧ್ಯಾ ಭಟ್ ಅಮೇರಿಕಾದಲ್ಲಿ ಅರಿವಳಿಕೆ ತಜ್ಞೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಾ.3-4-2018ರಂದು ಅಲ್ಪಕಾಲದ ಅಸೌಖ್ಯದಿಂದ ಭಗವತ್ಪಾದ ಸೇರಿದ ಶ್ರೀ ಕೆ ಸೂರ್ಯನಾರಾಯಣ ರಾಯರ ನಿಧನಕ್ಕೆ ಅವರ ಅಸಂಖ್ಯ ಬಂಧುಮಿತ್ರರು, ವಿದ್ಯಾರ್ಥಿಗಳು ಹಾಗೂ ಅಭಿಮಾನಿಗಳೊಂದಿಗೆ ಶ್ರೀ ಶಾರದಾ ಬಳಗವು ಸಂತಾಪ ಸೂಚಿಸುತ್ತಾ ಅವರ ಕುಟುಂಬಕ್ಕೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

**With Best Compliments From :**

*****Rajathadri Hotel Pvt. Ltd.**
Lodging & Boarding


Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

# ಪಾದೆಬೆಟ್ಟು ದೇವಸ್ಥಾನದಲ್ಲಿ ವೈದಿಕ ಶಿಬಿರ ಹಾಗೂ ನರಸಿಂಹ ಜಯಂತಿ


ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಕಳೆದ ಐದು ವರ್ಷಗಳಿಂದ ನಮ್ಮ ಸಮಾಜದ ವಟುಗಳಿಗೆ ವೈದಿಕ ಶಿಬಿರವನ್ನು ಪಡುಬಿದ್ರೆಯ ಸ್ಥಾನಿಕ ಬ್ರಾಹ್ಮಣ ಸಂಘದವರು ನಡೆಸಿಕೊಂಡು ಬರುತ್ತಿದ್ದಾರೆ. ಈ ಕಾರ್ಯಕ್ರಮಕ್ಕೆ ಉಡುಪಿಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಹಾಗೂ ಎ.ಬಿ.ಸಿ.ಡಿ ಮತ್ತು ಇ ಟ್ರಸ್ಟ್ ಇನ್ನ ಇವರು ಆರಂಭದಿಂದಲೂ ಸಹಭಾಗಿಗಳಾಗಿದ್ದಾರೆ. ಈ ವರ್ಷದ ವೈದಿಕ ಶಿಬಿರವು ತಾ.17-04-2018 ರಂದು ಆರಂಭವಾಯಿತು. ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಹಾಗೂ ಬ್ರಹ್ಮಶ್ರೀ ಕೃಷ್ಣರಾಜ ಭಟ್ಟರ ಮುತುವರ್ಜಿಯಲ್ಲಿ ಒಟ್ಟು ಮೂವತ್ತಾರು ವಟುಗಳ ಭಾಗವಹಿಸುವಿಕೆಯಿಂದ ವೈದಿಕ ಶಿಬಿರ ಆರಂಭಗೊಂಡಿತು. ವಟುಗಳ ಊಟ ಹಾಗೂ ವಸತಿಯನ್ನು ದೇವಳದಲ್ಲಿ ಏರ್ಪಾಟುಮಾಡಲಾಗಿತ್ತು. ಇದರ ಎಲ್ಲ ಉಸ್ತುವಾರಿಯನ್ನು ಪಡುಬಿದ್ರೆ ಸಂಘದ ಕಾರ್ಯಕರ್ತರು ಉತ್ಸಾಹದಿಂದ ನೋಡಿಕೊಂಡರು. ಪ್ರತಿದಿನ ಬೆಳಿಗ್ಗೆ ಐದೂವರೆ ಗಂಟೆಗೆ ಮಕ್ಕಳು ಎದ್ದು ಸ್ನಾನ ಶೌಚಾದಿಗಳನ್ನು ಮುಗಿಸಿದ ನಂತರ ಶ್ರೀಮತಿ ಅರ್ಚನಾ ರವರಿಂದ ಯೋಗಾಭ್ಯಾಸ ಪಾಠ ನಡೆಯುತ್ತಿತ್ತು. ನಂತರ ಜಪ ಹಾಗೂ ದೇವರಿಗೆ ಬೆಳಗ್ಗಿನ ಪೂಜೆ ಮುಗಿಸಿದ ಮೇಲೆ ಉಪಾಹಾರ. ನಂತರ ಗುರುಗಳಿಂದ ಮೊದಲನೆಯ, ಎರಡನೆಯ ಮೂರನೆಯ ವರ್ಷದ ಮಕ್ಕಳಿಗೆ ಪ್ರತ್ಯೇಕವಾಗಿ ಪಾಠ ನಡೆಯುತ್ತಿತ್ತು. ನಂತರ ಮಧ್ಯಾಹ್ನದ ಭೋಜನ. ಭೋಜನ ಸಂದರ್ಭದಲ್ಲಿ ಸುತ್ತುಗಟ್ಟುವುದು ಚೂರ್ಣಿಕೆ ಇತ್ಯಾದಿಗಳನ್ನು ಹೇಳಿಕೊಡಲಾಗುತ್ತಿತ್ತು. ಭೋಜನದ ನಂತರ ಸಂಜೆಯ ತನಕ ವಿರಾಮ, ಒಳಾಂಗಣ ಹಾಗೂ ಹೊರಾಂಗಣ ಆಟ. ಮುಸ್ಸಂಜೆಗೆ ಜಪ ಹಾಗೂ ದೇವರ ಸಂಜೆಯ ಪೂಜೆಯೊಂದಿಗೆ ದಿನದ ಚಟುವಟಿಕೆಗೆ ಪೂರ್ಣವಿರಾಮ. ಭೋಜನದ ನಂತರ ದೇವಳದ ಪೌಳಿಯಲ್ಲಿ ಎಲ್ಲಾ ಮಕ್ಕಳು ಜೊತೆಯಾಗಿ ನಿದ್ರೆ. ಹೀಗೆ ತಾ.27-04-2018ರ ತನಕ 10 ದಿನಗಳ ಶಿಬಿರ ನೆರವೇರಿತು. ಮಧ್ಯೆ ವಟುಗಳು ಬ್ರಹ್ಮಾಚಾರಿ ಆರಾಧನೆ ಹಾಗೂ ಶಂಕರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಪಾವಂಜೆ ವಾಗೀಶ ಶಾಸ್ತ್ರಿಗಳು, ಶ್ರೀ ಕೃಷ್ಣರಾಜ ಭಟ್, ಶ್ರೀ ನಾಗರಾಜ ಭಟ್, ಇತ್ಯಾದಿ ವೈದಿಕರು ಮಕ್ಕಳಿಗೆ ಮುತುವರ್ಜಿಯಿಂದ ಪಾಠ ಕಲಿಸಿದರು.

ತಾ.27-04-2018ರಂದು ನರಸಿಂಹ ಜಯಂತಿ. ಅದೇ ದಿನ ವೈದಿಕ ಶಿಬಿರದ ಕೊನೆಯದಿನ. ದೇವರಿಗೆ ಅಂದು ಬ್ರಹ್ಮಶ್ರೀ ವಾಗೀಶ ತಂತ್ರಿಗಳ ನೇತೃತ್ವದಲ್ಲಿ ದೇವಸ್ಥಾನದಲ್ಲಿ ದೇವರಿಗೆ ವಿಶೇಷಪೂಜೆ ನೆರವೇರಿತು. ನರಸಿಂಹ ಜಯಂತಿಯ ಪೂಜಾವಿಧಿಗಳು ಮುಗಿದ ನಂತರ ವೈದಿಕ ಶಿಬಿರದ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಯಿತು. ಈ ಸಮಾರಂಭದಲ್ಲಿ ಬ್ರಹ್ಮಶ್ರೀ ವಾಗೀಶಶಾಸ್ತ್ರಿಗಳು, ಡಾ. ವೈ. ಸುದರ್ಶನ ರಾವ್, ಶ್ರೀ ಚಂದ್ರಕಾಂತ ರಾವ್ ಇನ್ನ, ಶ್ರೀ ಎಂ.ಕೆ. ಮೋಹನ ರಾವ್, ಶ್ರೀ ಬಿ. ಜಯರಾಮ ರಾವ್ ಉಪಸ್ಥಿತರಿದ್ದರು. ಬ್ರಹ್ಮಶ್ರೀ ಕೃಷ್ಣರಾಜಭಟ್ಟರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮ ಆರಂಭವಾಯಿತು. ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ತಮ್ಮ ಮಕ್ಕಳನ್ನು ಸತತ ಮೂರು ವರ್ಷಗಳ ಕಾಲ ಈ ಶಿಬಿರಕ್ಕೆ ಕಳುಹಿಸುವಂತೆ ತಾಯಂದಿರನ್ನು ವಿನಂತಿಸಿದರು. ಶ್ರೀ ಬಿ.ಜಯರಾಮ ರಾಯರು ಅತಿಥಿಗಳನ್ನು ಶಾಲು ಸ್ಮರಣಿಕೆ ಇತ್ತು ಗೌರವಿಸಿದರು. ಶಿಬಿರದ ಗುರುಗಳನ್ನು ಗೌರವಿಸಲಾಯಿತು. ಶ್ರೀಮತಿ ವೇದಾವತಿ ರವರು ಧನ್ಯವಾದವಿತ್ತರು. ಶ್ರೀ ಅರುಣ್ ರಾವ್‌ರವರು ಕಾರ್ಯಕ್ರಮ ನಿರ್ವಹಿಸಿದರು. ನರಸಿಂಹ ಜಯಂತಿಯ ಪ್ರಯುಕ್ತ ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಶ್ರೀ ಶಾಂಕರತತ್ವ ಪ್ರಸಾರ ಅಭಿಯಾನದಿಂದ ಶ್ರೀ ಶಂಕರ ಜಯಂತಿ ಆಚರಣೆ



ಚಿಟ್ಪಾಡಿ ಶ್ರೀ ಶಾರದಾಂಬಾ ದೇವಸ್ಥಾನದಲ್ಲಿ ತಾ.20-04-2018ರಂದು ಶ್ರೀ ಕ್ಷೇತ್ರ ಶೃಂಗೇರಿಯ ಶ್ರೀ ಶಾಂಕರತತ್ವ ಪ್ರಸಾರ ಅಭಿಯಾನದ ವತಿಯಿಂದ ಶ್ರೀ ಶಂಕರಜಯಂತಿ ಆಚರಣೆ ನಡೆಯಿತು. ಜಿಲ್ಲಾ ಸಂಚಾಲಕ ಶ್ರೀ ಪ್ರಫುಲ್ಲಚಂದ್ರರಾಯರು, ಶ್ರೀ ಪಾವಂಜೆ ವಾಗೀಶಶಾಸ್ತ್ರಿಯವರು, ಡಾ| ಅಡೂರು ಭಾಸ್ಕರ್‌ರಾಯರು, ಶಾರದಾಂಬಾ ದೇವಸ್ಥಾನದ ಆಡಳಿತ ಮುಕ್ತೇಸರರಾದ ಶ್ರೀ ಜಯರಾಮರಾಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಕೃತಜ್ಞತೆಗಳು

ನಮ್ಮ ಸಮಾಜದ ಹಿರಿಯ ಚೇತನ ಪ್ರೊ| ಕೆ. ಸೂರ್ಯನಾರಾಯಣ ರಾಯರ ನೆನಪಿನಲ್ಲಿ ಅವರ ಮಕ್ಕಳಾದ ಡಾ| ಶರತ್ ರಾವ್, ಡಾ| ಶರಣ್ಯ ಭಟ್, ಡಾ| ಸಂಧ್ಯಾ ಭಟ್‌ರವರು ಈ ತಿಂಗಳ ಶ್ರೀಶಾರದಾ ಪತ್ರಿಕೆಯನ್ನು ಪ್ರಾಯೋಜಿಸಿರುತ್ತಾರೆ. ಅವರಿಗೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ತುಂಬು ಹೃದಯದ ಧನ್ಯವಾದಗಳು. ಶ್ರೀಶಾರದೆಯು ಅವರ ಕುಟುಂಬಕ್ಕೆ ಆರೋಗ್ಯೈಶ್ವರ್ಯಾಧಿ ಸಕಲ ಸೌಭಾಗ್ಯಗಳನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

-ಆಡಳಿತ ಮಂಡಳಿ

## ಚಿಣ್ಣರ ಅಂಗಳ



ಅನಘ ರಾವ್
8ನೇ ತರಗತಿ, ಬೆಂಗಳೂರು


With Best Compliments From :




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+


Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org